ವಿಜಯಪುರ | ಸಂಪುಟ 04 | ಸಂಚಿಕೆ 060 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily ಜನಪರ-ಜೀವಪರ ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ Editor: Indushekhar Manur

editor.udayarashmi@gmail.com RNI NO: KARKAN/2023/86203 ಬುಧವಾರ, ಏಪ್ರಿಲ್, 22, 2026

"ಮಕ್ಕಳಿರುವ ಮನೆಯೇ ಮಂತ್ರಾಲಯ. ಮಕ್ಕಳನ್ನು ಪ್ರೀತಿಸುವ ಮನಸ್ಸುಗಳೇ ನಿಜವಾದ ದೇವಮಂದಿರ. ಯಾವ ಮನೆಯಲ್ಲಿ ಮಕ್ಕಳ ಕಲರವವಿದೆಯೋ ಅಲ್ಲಿ ಸದಾ ಸಂತೋಷದ ಸುಳಿಗಾಳಿ ಸೂಸುತ್ತಲೇ ಇರುತ್ತದೆ. ಮಕ್ಕಳಿಗೆ ಬೇಸಿಗೆ ರಜೆ ಇರುವ ಈ ದಿನಗಳಲ್ಲಿ ಪಾಲಕರು ಮಕ್ಕಳೊಂದಿಗೆ ಹೆಚ್ಚು ಸಮಯ ಕಳೆಯಬೇಕು."



■ ಸಂಗಮೇಶ ಬಬಲೇಶ್ವರ
ನಿಕಟಪೂರ್ವ ಅಧ್ಯಕ್ಷರು, ಕರ್ನಾಟಕ ಬಾಲ ವಿಕಾಸ ಅಕಾಡೆಮಿ

# ಮಹಿಳೆಯರ ಸಬಲೀಕರಣಕ್ಕೆ ಶಿಕ್ಷಣವೇ ಮುಖ್ಯ ಅಸ್ತ್ರ

## ವಿಜಯಪುರದಲ್ಲಿ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ 17ನೇ ಘಟಿಕೋತ್ಸವದಲ್ಲಿ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅಭಿಮತ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಅಕ್ಕಮಹಾದೇವಿಯವರ ಹೆಸರಿನ ವಿಶ್ವವಿದ್ಯಾಲಯವು ಮಹಿಳಾ ಶಿಕ್ಷಣ, ಸಬಲೀಕರಣ, ಸ್ವಾವಲಂಬನೆ, ಆತ್ಮವಿಶ್ವಾಸ ಮತ್ತು ಆಧ್ಯಾತ್ಮಿಕ ಪ್ರಜ್ಞೆಯ ಉಜ್ವಲ ಕೇಂದ್ರವಾಗಿದೆ ಎಂದು ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು ಹೇಳಿದರು.

ಮಂಗಳವಾರ ವಿಜಯಪುರದಲ್ಲಿ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ 17ನೇ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಿಜವಾದ ಜ್ಞಾನವು ವ್ಯಕ್ತಿಯನ್ನು ಸ್ವತಂತ್ರ, ನಿರ್ಭೀತ ಮತ್ತು ಸ್ವಾವಲಂಬಿಯನ್ನಾಗಿ ಮಾಡುತ್ತದೆ ಎಂಬ ಸಂದೇಶವನ್ನು ಅಕ್ಕಮಹಾದೇವಿ ಅವರು ತಮ್ಮ ಜೀವನದ ಮೂಲಕ ನೀಡಿದರು. ಶಿಕ್ಷಣವು ಜ್ಞಾನ ಸಂಪಾದನೆಯ ಮಾರ್ಗ ಮಾತ್ರವಲ್ಲದೆ, ಆತ್ಮ ವಿಶ್ವಾಸ ಮತ್ತು ಸಾಮಾಜಿಕ ಸೇವೆಯ ಮಾರ್ಗವಾಗಿದೆ ಎಂದು ಅವರ ಆದರ್ಶಗಳು ನಮಗೆ ಸ್ಫೂರ್ತಿ ನೀಡುತ್ತವೆ ಎಂದರು.

ಶಿಕ್ಷಣದಲ್ಲಿ ಪಡೆದ ಪದವಿ ಜ್ಞಾನಕ್ಕೆ ಸಾಕ್ಷಿಯಾಗಿರುವುದರ ಜೊತೆಗೆ ಶಿಸ್ತು, ಕಠಿಣ ಪರಿಶ್ರಮ ಮತ್ತು ದೃಢಸಂಕಲ್ಪದ ಸಂಕೇತವಾಗಿದೆ. ಈ ಯುಗವು ಅವಕಾಶಗಳು ಮತ್ತು ಸವಾಲುಗಳಿಂದ ಕೂಡಿದೆ. ಅಂತಹ ಪರಿಸ್ಥಿತಿಯಲ್ಲಿ, ನೈತಿಕ ಮೌಲ್ಯಗಳು, ಸಾಮಾಜಿಕ ಜವಾಬ್ದಾರಿ ಮತ್ತು ಸೂಕ್ಷ್ಮತೆಯ ಜೊತೆಗೆ ಜ್ಞಾನವನ್ನು ಕೊಂಡೊಯ್ಯಬೇಕಾಗುತ್ತದೆ. ಪ್ರಸ್ತುತ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಯ ಯುಗ. ಡಿಜಿಟಲ್ ಇಂಡಿಯಾ, ಸ್ಟಾರ್ಟಅಪ್ಇಂಡಿಯಾ, ಮೇಕ್ ಇನ್ ಇಂಡಿಯಾ ಮತ್ತು ವೋಕಲ್ ಫಾರ್ ಲೋಕಲ್‌ನಂತಹ ಉಪಕ್ರಮಗಳ ಮೂಲಕ ಭಾರತವು ಜಾಗತಿಕ ವೇದಿಕೆಯಲ್ಲಿ ತನ್ನ ಉಪಸ್ಥಿತಿಯನ್ನು ವೇಗವಾಗಿ ಬಲಪಡಿಸುತ್ತಿದೆ. ಈ ಪ್ರಗತಿಗೆ ಕೊಡುಗೆ ನೀಡಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.




### ಒದುತ್ತಿರುವಾಗಲೇ ಗಳಿಕೆ



"ಮುಂಬರುವ ದಿನಗಳಲ್ಲಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ 'ಓದುತ್ತಿರುವಾಗಲೇ ಗಳಿಕೆ' ಎಂಬ ವಿನೂತನ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿನಿಯರಿಗೆ ಬಯೋಡೀಸೆಲ್ ಘಟಕ, ಕಾಗದ ಮರುಬಳಕೆ ಘಟಕ, ಅನನ್ಯ ಆಹಾರ ಸಂಸ್ಕರಣಾ ಕೇಂದ್ರ ಮತ್ತು ಗ್ರೀನ್‌ಹೌಸ್‌ಗಳಲ್ಲಿ ವಿವಿಧ ಕೌಶಲಗಳನ್ನು ಕಲಿಸುವ ವ್ಯವಸ್ಥೆ ರೂಪಿಸಲಾಗುತ್ತಿದೆ."

■ **ಪ್ರೊ. ವಿಜಯಾ ಕೋರಿಶೆಟ್ಟಿ**
ಕುಲಪತಿ, ಅಕ್ಕಮಹಾದೇವಿ ಮಹಿಳಾ ವಿವಿ, ವಿಜಯಪುರ

ಮಹಿಳೆಯರು ದೇಶೀಯ ಮತ್ತು ವೃತ್ತಿಪರ ಪ್ರಪಂಚಗಳನ್ನು ಮೀರಿ ಸಾಮಾಜಿಕ ಮತ್ತು ರಾಷ್ಟ್ರೀಯ ಸೇವೆಯ ಕ್ಷೇತ್ರವನ್ನು ಪ್ರವೇಶಿಸಿದ್ದಾರೆ. ಅವರು ಕಷ್ಟಕರವಾದ ಅಡೆತಡೆಗಳನ್ನು ನಿವಾರಿಸಿ ಹೊಸ ಅವಕಾಶಗಳ ಜಗತ್ತನ್ನು ಪ್ರವೇಶಿಸಿದ್ದಾರೆ. ಖಗೋಳಶಾಸ್ತ್ರ, ಬಾಹ್ಯಾಕಾಶ ಪ್ರಯಾಣ, ವೈದ್ಯಕೀಯ, ತಂತ್ರಜ್ಞಾನ, ಎಂಜಿನಿಯರಿಂಗ್, ವಾಣಿಜ್ಯ, ಗಣಿತ, ಮಿಲಿಟರಿ ಸೇವೆ ಮತ್ತು ಕ್ರೀಡೆಗಳಂತಹ ವೈವಿಧ್ಯಮಯ ಕ್ಷೇತ್ರಗಳಲ್ಲಿ ಅವರು ತಮಗಾಗಿ ವಿಶಿಷ್ಟ ಗುರುತನ್ನು ರೂಪಿಸಿಕೊಂಡಿದ್ದಾರೆ. ಈ ತಾಂತ್ರಿಕ ಯುಗದಲ್ಲಿಯೂ ಸಹ, ಮಹಿಳೆಯರು ಸಂಶೋಧನೆಯ ಮೂಲಕ ಹೊಸ ಸಾಧ್ಯತೆಗಳನ್ನು ಸೃಷ್ಟಿಸಿದ್ದಾರೆ ಎಂದು ಹೇಳಿದರು.

### ಮೂವರು ಸಾಧಕಿಯರಿಗೆ ಗೌರವ ಡಾಕ್ಟರೇಟ್ ಪ್ರದಾನ




ವಿಜಯಪುರದಲ್ಲಿ ಮಂಗಳವಾರ ನಡೆದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ 17ನೆಯ ಘಟಿಕೋತ್ಸವದಲ್ಲಿ ಪಾರ್ವತೆವ್ವ ಹೊಂಗಲ್, ಡಾ.ಸಂಗೀತಾ ಕಟ್ಟಿಮನಿ ಹಾಗೂ ಆಶಾದೇವಿ ಗುಡಗುಂಟಿ ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರು ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಮುಂಬೈನ ಎಸ್‌ಎನ್‌ಡಿಟಿ ಮಹಿಳಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಉಜ್ವಲಾ ಚಕ್ರದೇವ್, ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್.ಲಕ್ಕಣ್ಣವರ ಮತ್ತಿತರರು ಉಪಸ್ಥಿತರಿದ್ದರು.

ಈ ಘಟಿಕೋತ್ಸವದಲ್ಲಿ, ಶ್ರೀಮತಿ ಸಂಗೀತಾ, ಶ್ರೀಮತಿ ಪಾರ್ವತಿ ಸಿದ್ದಪ್ಪ ಹೊಂಗಲ್ ಮತ್ತು ಶ್ರೀಮತಿ ಆಶಾದೇವಿ ಅವರಿಗೆ ಗೌರವ ಪದವಿಗಳನ್ನು ನೀಡಲಾಗಿದೆ. ಅವರಿಗೆ ಅಭಿನಂದಿಸುತ್ತಾ, ಸಮಾಜಕ್ಕಾಗಿ ಅವರ ಕಾರ್ಯ ಮುಂದುವರೆಯಲಿ ಎಂದು ಆಶಿಸುತ್ತೇನೆಂದರು.

ಘಟಿಕೋತ್ಸವ ಭಾಷಣ ಮಾಡಿದ ಮುಂಬೈನ ಮಹಿಳಾ ವಿವಿಯ ಕುಲಪತಿ ಪ್ರೊ. ಉಜ್ವಲಾ ಚಕ್ರದೇವ್, ವ್ಯಾಖ್ಯಾನ ವಿಶ್ವವಿದ್ಯಾಲಯಗಳು ನೀಡುವ ಪದವಿ ಪ್ರಮಾಣ ಪತ್ರಗಳಿಂದ ವಿದ್ಯಾರ್ಥಿಗಳ ಭವಿಷ್ಯ ಅರಳುವುದಿಲ್ಲ. ಪದವಿಯೊಟ್ಟಿಗೆ ಕೌಶಲ್ಯಗಳು, ಉದ್ಯೋಗಾರ್ಹತೆ ಮತ್ತು ಜೀವನಪೂರ್ತಿ ಕಲಿಕೆ ಮತ್ತು ಹೊಂದಾಣಿಕೆಯಿಂದ ವಿದ್ಯಾರ್ಥಿಗಳ ಭವಿಷ್ಯ ನಿರ್ಧಾರವಾಗುತ್ತದೆ ಎಂದು ಹೇಳಿದರು.

ಮುಂಬೈನ ಎಸ್‌ಎನ್‌ಡಿಟಿ ಮಹಿಳಾ ವಿಶ್ವವಿದ್ಯಾಲಯ ಮತ್ತು ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯಗಳಂತಹ ಸಂಸ್ಥೆಗಳು ಸಮಾನ ಉದ್ದೇಶ ಹೊಂದಿವೆ. ಶಿಕ್ಷಣದ ಮೂಲಕ ಮಹಿಳೆಯರನ್ನು ಸಬಲೀಕರಣಗೊಳಿಸುವುದು ಹಾಗೂ ಅವರನ್ನು ನಾಯಕಿಯರಾಗಿ ಮತ್ತು ಬದಲಾವಣೆಯ ಸಾರಥಿಗಳಾಗಿ ರೂಪಿಸುವುದು ಈ ಎರಡೂ ವಿಶ್ವವಿದ್ಯಾನಿಲಯಗಳ ಪ್ರಮುಖ ಉದ್ದೇಶವಾಗಿದೆ ಎಂದರು.

ಮಹಿಳಾ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ವಿಜಯಾ ಕೋರಿಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ವೇದಿಕೆಯ ಮೇಲೆ ಗೌರವ ಡಾಕ್ಟರೇಟ್ ಪದವಿಗೆ ಭಾಜನರಾದ ಶ್ರೀಮತಿ ಪಾರ್ವತೆವ್ವ ಸಿದ್ದಪ್ಪ ಹೊಂಗಲ್, ಡಾ.ಸಂಗೀತಾ ಎನ್ ಕಟ್ಟಿಮನಿ ಮತ್ತು ಶ್ರೀಮತಿ ಆಶಾದೇವಿ ಜಗದೀಶ ಗುಡಗುಂಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ. ಬಿ.ಎಲ್.ಲಕ್ಕಣ್ಣವರ, ಆರ್ಥಿಕ ಅಧಿಕಾರಿ ರಾಮಣ್ಣ ಅಥಣಿ, ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್ ಸದಸ್ಯರು, ವಿವಿಧ ನಿಕಾಯಗಳ ಡೀನರು ಉಪಸ್ಥಿತರಿದ್ದರು.




# ಜಗತ್ತಿಗೆ ಅದ್ವೈತ ತತ್ವ ಪರಿಚಯಿಸಿದ ತತ್ವಜ್ಞ ಆದಿ ಶಂಕರಾಚಾರ್ಯರು

### ವಿಜಯಪುರದಲ್ಲಿ ನಡೆದ ಶ್ರೀ ಆದಿ ಶಂಕರಾಚಾರ್ಯರ ಜಯಂತಿ ಆಚರಣೆಯಲ್ಲಿ ಆದಿತ್ಯಾ ವೈದ್ಯ ಅಭಿಮತ


■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇವರ ಸಹಯೋಗದಲ್ಲಿ ಮಂಗಳವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಶ್ರೀ ಆದಿ ಶಂಕರಾಚಾರ್ಯರ ಜಯಂತಿ ಅಂಗವಾಗಿ ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಅವರು ಜಯಂತಿ ಕಾರ್ಯಕ್ರಮಕ್ಕೆ ದೀಪ ಬೆಳಗಿಸುವ ಮೂಲಕ ಹಾಗೂ ಶ್ರೀ ಆದಿ ಶಂಕರಾಚಾರ್ಯರ ಭಾವಚಿತ್ರಕ್ಕೆ ಪುಷ್ಪ ಗೌರವ ಸಲ್ಲಿಸಿದರು.

ಈ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಆದಿತ್ಯಾ ವೈದ್ಯ ಅವರು, ಭಾರತದ ಆಧ್ಯಾತ್ಮಿಕ ಇತಿಹಾಸದಲ್ಲಿ ಅಪ್ರತಿಮ ಸ್ಥಾನ ಹೊಂದಿರುವ ಶ್ರೀ ಆದಿ ಶಂಕರಾಚಾರ್ಯರು ವೇದಗಳಿಗೆ ಭಾಷ್ಯ ಬರೆದು ಜಗತ್ತಿಗೆ ಅದ್ವೈತ ತತ್ವವನ್ನು ಪರಿಚಯಿಸಿದ ಮಹಾನ್ ತತ್ವಜ್ಞರು ಹಾಗೂ ಇಡೀ ದೇಶ ಸಂಚರಿಸಿ ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದ ಶ್ರೀ ಆದಿ ಶಂಕರಚಾರ್ಯರ ಜೀವನ ಇಂದಿನವರಿಗೆ ಆದರ್ಶಪ್ರಾಯವಾಗಿದೆ ಶಂಕರಾಚಾರ್ಯರು ಮಾಹಾ ವಿದ್ವಾಂಸ, ಕವಿ ಯಾಗಿದ್ದರು ಅವರ ಜೀವನದ ಮೌಲ್ಯಗಳು ಪ್ರಸ್ತುತವಾಗಿವೆ ಎಂದು ಅವರು ಹೇಳಿದರು.

ವಿವಿದ ಸಿದ್ದಾಂತಗಳ ಅಥ–ರ್ವನ್ನು ಸರಳವಾಗಿ ಜನರಿಗೆ ತಲುಪಿಸುವಲ್ಲಿ ಶಂಕರಾಚಾರ್ಯರ ಪಾತ್ರ ಅಪಾರವಾಗಿದೆ ಎಂದರು. ಅವರು ಬರೆದ ಭಾಷ್ಯಗಳು ಇಂದಿಗೂ ತತ್ವಜ್ಞಾನಿಗಳ ಮಾರ್ಗದರ್ಶಕವಾಗಿವೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಧಿಕಾರಿಗಳಾದ ನಾರಾಯಣಪ್ಪ ಕುರುಬರ, ಮಹಾನಗರ ಪಾಲಿಕೆ ಉಪ ಆಯುಕ್ತರಾದ ಮಹಾವೀರ ಬೋರಣ್ಣವರ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ರಾಜಶೇಖರ್ ದೈವಾಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಂತೋಷ ಭೋವಿ, ಮೋಹನ್ ಕಟ್ಟಿಮನಿ, ವಿದ್ಯಾವತಿ ಅಂಕಲಗಿ, ಶ್ರೀರಾಮ ಭಟ್ಟ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.




# ಪತ್ರಕರ್ತ ಇಂದುಶೇಖರ ಮಣೂರ ಗೆ 'ಬಸವ ಸೇವಾ ಪ್ರಶಸ್ತಿ'

### ಪುಣೆಯ ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರದ ಪ್ರಶಸ್ತಿ | ಏ.25 ರಂದು ವಿಜಯಪುರದಲ್ಲಿ ಪ್ರಶಸ್ತಿ ಪ್ರದಾನ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಿಲ್ಲೆಯ ಹಿರಿಯ ಪತ್ರಕರ್ತ ಹಾಗೂ 'ಉದಯರಶ್ಮಿ' ದಿನಪತ್ರಿಕೆ ಸಂಪಾದಕ ಇಂದುಶೇಖರ ಮಣೂರ ಅವರು 'ಬಸವ ಸೇವಾ ಪ್ರಶಸ್ತಿ' ಗೌರವಕ್ಕೆ ಭಾಜನರಾಗಿದ್ದಾರೆ.

ಪುಣೆಯ ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ ಈ 'ಬಸವ ಸೇವಾ ಪ್ರಶಸ್ತಿ' ಯನ್ನು ಕೊಡಮಾಡುತ್ತಿದೆ.

"ವಚನ ಸಾಹಿತ್ಯ ಮತ್ತು ಶರಣ ಸಂಸ್ಕೃತಿಯ ಪ್ರಸಾರಕ್ಕಾಗಿ ಶ್ರಮಿಸುತ್ತಿರುವ ನಿಮ್ಮ ಶ್ರಮ ಮತ್ತು ಬದ್ಧತೆಯನ್ನು ಗೌರವಿಸಲು ಮಾನವೀಯತೆ ಹಾಗೂ ಸಮಾನತೆಯ ಸಂದೇಶವನ್ನು ಸಾರಿದ ವಿಶ್ವಗುರು ಬಸವಣ್ಣನವರ ಹೆಸರಿನ ಪ್ರಶಸ್ತಿ ತಮಗೆ ಸಂದಿರುವುದು ನಿಮ್ಮ ಸೇವೆಗೆ ಸಂದ ಗೌರವ" ಎಂದು ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರದ ಅಧ್ಯಕ್ಷ ಡಾ.ಶಶಿಕಾಂತ ಪಟ್ಟಣ ತಿಳಿಸಿದ್ದಾರೆ.

ಪುಣೆಯ ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರದ ವಿಜಯಪುರ ಜಿಲ್ಲಾ ಘಟಕದ ವತಿಯಿಂದ, ಏಪ್ರಿಲ್ 25 ರಂದು ವಿಜಯಪುರದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಮಂಗಲ ಕಾರ್ಯಾಲಯದಲ್ಲಿ ಏರ್ಪಡಿಸಿದ ಬಸವ ಜಯಂತಿ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಗಣ್ಯರ ಸಮ್ಮುಖದಲ್ಲಿ ಇಂದುಶೇಖರ ಮಣೂರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಡಾ.ಶಶಿಕಾಂತ ಪಟ್ಟಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅಭಿನಂದನೆ

ಪ್ರಶಸ್ತಿ ಗೌರವಕ್ಕೆ ಪಾತ್ರರಾದ ಕಾನಿಪ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಇಂದುಶೇಖರ ಮಣೂರ ಅವರನ್ನು 'ಉದಯರಶ್ಮಿ' ಪತ್ರಿಕಾ ಬಳಗ ಹಾಗೂ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಮತ್ತು ತಾಲೂಕು ಘಟಕಗಳ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರು ಅಭಿನಂದಿಸಿದ್ದಾರೆ.

# ಏ.23 ರಿಂದ ಪಂಚಕಲ್ಯಾಣ ಪ್ರತಿಷ್ಠಾ ಮಹಾ ಮಹೋತ್ಸವ

## ವಿಶ್ವಶಾಂತಿ ಹಾಗೂ ವಿಶ್ವ ಕಲ್ಯಾಣಕ್ಕಾಗಿ ಉತ್ಸವ | ಪ. ಪೂ.1008 ಆಚಾರ್ಯ ಗುಣದರನಂದಿ ಮುನಿ ಮಹಾರಾಜರಿಂದ ವಿವರಣೆ

■ ಉದಯರಶ್ಮಿ ದಿನಪತ್ರಿಕೆ



ಜಮಖಂಡಿ: ವಿಶ್ವಶಾಂತಿ ಹಾಗೂ ವಿಶ್ವ ಕಲ್ಯಾಣಕ್ಕಾಗಿ ಒಂಬತ್ತು ದಿನಗಳ ಕಾಲ ಪಂಚಕಲ್ಯಾಣ ಪ್ರತಿಷ್ಠಾ ಮಹಾ ಮಹೋತ್ಸವ ಹಾಗೂ 1008 ಭಗವಾನ ಪಾರ್ಶ್ವನಾಥ ತೀರ್ಥಂಕರ ಮಹಾ ಮಸ್ತಾಭಿಷೇಕ ಮತ್ತು ಪುರಾತನ 1008 ಭಗವಾನ ಆದಿನಾಥ ತೀರ್ಥಂಕರ ಜಿನ ಮಂದಿರ ಜೀರ್ಣೋದ್ಧಾರಗೊಂಡಿರುವ ನಿಮಿತ್ತ ವಜ್ರ ಮಹೋತ್ಸವ ಕಾರ್ಯಕ್ರಮ ಜರುಗುತ್ತದೆ ಎಂದು ಪ. ಪೂ.1008 ಆಚಾರ್ಯ ಗುಣದರನಂದಿ ಮುನಿ ಮಹಾರಾಜರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ತಾಲೂಕಿನ ಆಲಗೂರ ಗ್ರಾಮದ ಜೈನ ಮಂದಿರದಲ್ಲಿ ಮಾತನಾಡಿದ ಅವರು, ವಿಶ್ವ ಶಾಂತಿ ಹಾಗೂ ವಿಶ್ವ ಕಲ್ಯಾಣಕ್ಕಾಗಿ 9 ದಿನಗಳ ಕಾರ್ಯಕ್ರಮ ಜರುಗುವುದು, ಇದೇ ದಿನಾಂಕ 23 ರಂದು ಧ್ವಜಾರೋಹಣ ಇಂದ್ರ ಸಭೆ, 24 ರಂದು ಗರ್ಭ ಕಲ್ಯಾಣ, 25 ರಂದು ಭಗವದ್ ಜನ್ಮ ಕಲ್ಯಾಣ, 26 ರಂದು ರಾಜ್ಯಾಭೀಷೇಕ,27 ರಂದು ದೀಕ್ಷಾ ಕಲ್ಯಾಣ, 28 ರಂದು ಕೇವಲಜ್ಞಾನ ಕಲ್ಯಾಣ,29 ರಂದು ನಿರ್ವಾಣ ಕಲ್ಯಾಣ, ದಿನಾಂಕ 30 ಹಾಗೂ 1/5/2026 ರಂದು ಮಹಾಮಸ್ತಾಭಿಷೇಕ ಕಾರ್ಯಕ್ರಮದಲ್ಲಿ 508 ಮಂಗಳ ಕಲಶಗಳಿಂದ ಭವ್ಯ ಮಹಾಮಸ್ತಾಭಿಷೇಕ ಜರುಗುವುದು.

9 ದಿನಗಳ ಈ ಕಾರ್ಯಕ್ರಮದಲ್ಲಿ ಎಲ್ಲ ಧರ್ಮದ ಸನ್ಯಾಸಿಗಳು, ಧಾರ್ಮಿಕ ಮುಖಂಡರು, ರಾಜಕೀಯ ಮುಖಂಡರು ಭಾಗವಹಿಸುವರು, ಪ್ರತಿದಿನ ಧಾರ್ಮಿಕ ಪ್ರವಚನ , ಸಂಗೀತ ಕಾರ್ಯಕ್ರಮವಿರುತ್ತದೆ, ಪ್ರತಿನಿತ್ಯ ಸುಮಾರು 50 ಸಾವಿರ ದಿನದ 1 ಲಕ್ಷ ಜನ ಪಾಲ್ಗೊಳ್ಳುವರು,30,000 ಸಾವಿರ ಜನ ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಮಾಡಲಾಗಿದೆ,

ಪ್ರತಿನಿತ್ಯ ಮೂರು ಹೊತ್ತು ನಿರಂತರ ಅನ್ನ ದಾಸೋಹದ ವ್ಯವಸ್ಥೆ ಮಾಡಲಾಗಿದೆ ಹಾಗೂ ಉಚಿತವಾಗಿ ಕಬ್ಬಿನ ಹಾಲಿನ ವ್ಯವಸ್ಥೆ ಮಾಡಲಾಗಿದೆ. ಆಲಗೂರ ಗ್ರಾಮದಲ್ಲಿರುವ ಪ್ರತಿಯೊಂದು ದೇವಸ್ಥಾನಕ್ಕೂ ಲೈಟಿಂಗ್ ವ್ಯವಸ್ಥೆ ಮಾಡಲಾಗಿದೆ, ಈ ಒಂದು ಕಾರ್ಯಕ್ರಮಕ್ಕೆ ವಿಶೇಷ ಆಮಂತ್ರಿತರಾಗಿ ಸ್ವಸ್ತಿಶ್ರೀ ಜಿನಸೇನ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮಿಗಳು ಸಂಸ್ಥಾನ ಮಠ ನಾಂದಣಿ, ಸ್ವಸ್ತಿಶ್ರೀ ಧರ್ಮಸೇನ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮಿಗಳು ನವಗ್ರಹ ತೀರ್ಥ ವರೂರ, ಆನಂದ ದೇವರು ಓಲೆ ಮಠ ಜಮಖಂಡಿ, ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯರು ಮುತ್ತಿನ ಕಂತಿಮಠ ಜಮಖಂಡಿ, ಮಲ್ಲಯ್ಯ ಮಠಪತಿ ಶ್ರೀ ಚಂದ್ರಗಿರಿ ದೇವಿ ಮಠ ಆಲಗೂರ, ಲಕ್ಷ್ಮಣ್ ಮುತ್ತ್ಯಾ ಶ್ರೀ ಧರಿದೇವರ ಮಠ ಆಲಗೂರ ಶ್ರೀಗಳು ಅನೇಕ ಶ್ರೀಗಳು ಸೇರಿದಂತೆ ರಾಜ್ಯಪಾಲರು, ಮುಖ್ಯಮಂತ್ರಿಗಳು, ಸಚಿವರು ಶಾಸಕರು ಮಾಜಿ ಶಾಸಕರು ಪಾಲ್ಗೊಳ್ಳುವರು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪ. ಪೂ.1008 ಆಚಾರ್ಯ ಕಲ್ಯಾಣ ಸಾಗರ ಮುನಿರಾಜರು, ವರ್ಧಮಾನ ನ್ಯಾಮಗೌಡ, ಪಿ.ಟಿ.ಉಪಾಧ್ಯೆ, ಆದಿನಾಥ ನರಸಗೊಂಡ, ಶ್ರೀಮಂತ ಖಿದ್ರಾಪೂರ, ಭರತೇಶ್ ಖಿದ್ರಾಪೂರ, ಅನ್ನೇಶ್ ಪರಮಗೊಂಡ, ಅಭಿನಂದನ್ ಪರಮಗೊಂಡ, ಶೀತಲ್ ಮಗದುಮ, ನೇಮಿನಾಥ್ ತೋನಶ್ಯಾಳ, ಬಾಹುಬಲಿ ಪರಮಗೊಂಡ ಇದ್ದರು.



# ನೂರಕ್ಕೆ ನೂರರಷ್ಟು ಫಲಿತಾಂಶ ಸಾಧಿಸಿದ ನಾಗನೂರು ಕಾಲೇಜು

**ಬೈಲಹೊಂಗಲ ತಾಲೂಕಿನ ಸರಕಾರಿ ಎಸ್.ಪಿ.ಎಂ ಪದವಿ ಪೂರ್ವ ಕಾಲೇಜ್ ಸಾಧನೆ**

■ ಉದಯರಶ್ಮಿ ದಿನಪತ್ರಿಕೆ

ಬೈಲಹೊಂಗಲ: ತಾಲೂಕಿನ ಸರಕಾರಿ ಎಸ್.ಪಿ.ಎಂ ಪದವಿ ಪೂರ್ವ ಕಾಲೇಜಿನ ಫಲಿತಾಂಶ 100 ಕ್ಕೆ 100 ರಷ್ಟು ಸಾಧನೆ ಮಾಡಿದೆ.

ಪರೀಕ್ಷೆಗೆ ಕುಳಿತ ಒಟ್ಟು 46 ವಿದ್ಯಾರ್ಥಿಗಳಲ್ಲಿ 12 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 30 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ವ್ಯವಹಾರ ಅಧ್ಯಯನ ವಿಷಯದಲ್ಲಿ–5, ಇತಿಹಾಸ–2, ಅರ್ಥಶಾಸ್ತ್ರ, ಕನ್ನಡ, ಸಮಾಜಶಾಸ್ತ್ರ ವಿಷಯಗಳಲ್ಲಿ ತಲಾ ಒಬ್ಬ ವಿದ್ಯಾರ್ಥಿ 100 ಅಂಕಗಳಿಸುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಕಿತ್ತೂರಿನ ಶಾಸಕ ಬಾಬಾಸಾಹೇಬ ದೇ ಪಾಟೀಲ ಇವರು ಅಭಿನಂದಿಸಿ ಹರ್ಷ ವ್ಯಕ್ತಪಡಿಸಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಕಾಲೇಜಿನ ಪ್ರಾಚಾರ್ಯರಾದ ಶ್ರೀಮತಿ ಜಿ.ಕೆ.ಸಂಬಣ್ಣವರ ಹಾಗೂ ಉಪನ್ಯಾಸಕರು ಮತ್ತು ಕಾ.ಆ.ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು ಹರ್ಷ ವ್ಯಕ್ತಪಡಿಸಿದ್ದಾರೆ.

# ಸರ್ವರಿಗೂ ಸಮಾನತೆ ಸಾರಿದ ವಿಶ್ವಗುರು ಬಸವಣ್ಣನವರು: ಮಾಜಿ ಶಾಸಕ ನರಿಬೋಳ್

ಜೇವರ್ಗಿ,ಏ.20– ಸರ್ವರಿಗೂ ಸಮಾನತೆ ಸಾರಿದ ವಿಶ್ವಗುರು ಬಸವಣ್ಣನವರ ಆದರ್ಶಗಳು ಇಂದಿಗೂ ಸಹ ಪ್ರಸ್ತುತವಾಗಿವೆ ಎಂದು ಮಾಜಿ ಶಾಸಕ ಹಾಗೂ ಜೆಡಿ–ಎಸ್ ರಾಜ್ಯ ಕಾರ್ಯಾಧ್ಯಕ್ಷ ದೊಡ್ಡಪ್ಪಗೌಡ ಪಾಟೀಲ್ ನರಿಬೋಳ್ ಅವರು ಹೇಳಿದರು.

ಪಟ್ಟಣದ ಬಸವೇಶ್ವರ್ ಚೌಕ್ ಹತ್ತಿರ ಸೋಮವಾರ ಜರುಗಿದ ಬಸವೇಶ್ವರರ ಜಯಂತಿ ಸಂಭ್ರಮದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯುವ ಪೀಳಿಗೆಯು ಬಸವಣ್ಣನವರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಕರ್ನಾಟಕದ ಸಾಂಸ್ಕೃತಿಕ ನಾಯಕ ಜಗಜ್ಯೋತಿ ಬಸವೇಶ್ವರರು ಸಮಾನತೆಯ ಹರಿಕಾರರು ಎಂದು ಬಣ್ಣಿಸಿದರು.

ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯ ಕಾರ್ಯದರ್ಶಿ ರಾಜಶೇಖರ್ ಸೀರಿ ಅವರು ಮಾತನಾಡಿ, 12ನೇ ಶತಮಾನದ ಬಸವಾದಿ ಶರಣರ ಒಂದು ವಚನಗಳು ಮೂಲಕ ಸಮಾನತೆ ಸಾರಿ ಅಸ್ಪೃಶ್ಯತೆ ನಿವಾರಣೆ ಮಾಡಲು ಜಗಜ್ಯೋತಿ ಬಸವಣ್ಣನವರು ಸಾಕಷ್ಟು ಪರಿಶ್ರಮಪಟ್ಟರು. ಅವರು ಅನುಭವ ಮಂಟಪದಲ್ಲಿ ಎಲ್ಲ ಜಾತಿ ಜನಾಂಗದವರಿಗೆ ಸಮಾನತೆ ಸೋದರತ್ವ ನೀಡಿದ ಮಹಾ ವೈಚಾರಿಕ ಚಿಂತನೆ ಉಳ್ಳ ನಾಯಕ ಮಹಾಪುರುಷ ಎಂದು ಬಣ್ಣಿಸಿದರು.

ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಶಿವರಾಜ್ ಪಾಟೀಲ್ ರದ್ದೇವಾಡಗಿ ಅವರು ಮಾತನಾಡಿ, ಬಸವಣ್ಣನವರು



ಕಾಯಕ ಜೀವಿ ದುಡಿಯುವ ಜನರಿಗೆ ಧೈರ್ಯ ಕೊಡುವ ಶ್ರಮಪಡುವ ಕಾಯಕವೇ ಕೈಲಾಸವೆಂದು ಸಂದೇಶ ಸಾರಿದರು ಎಂದರು. ಅಧ್ಯಕ್ಷತೆಯನ್ನು ಅಖಿಲ ಭಾರತ ವೀರಶೈವ ಸಮಾಜದ ತಾಲ್ಲೂಕು ಅಧ್ಯಕ್ಷ ಸಿದ್ದು ಅಂಗಡಿ ಅವರು ವಹಿಸಿದ್ದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಗುರುಲಿಂಗಪ್ಪ ಗೌಡ ಮಾಲಿಪಾಟೀಲ್ ವಿಜಯ್‌ಕುಮಾರ್ ಹಿರೇಮಠ್, ಜಾಗತಿಕ ಲಿಂಗಾಯತ ಮಹಾಸಭಾ ಅಧ್ಯಕ್ಷ ನೀಲಕಂಠ ಅವಂಟಿ, ಸಮಾಜದ ಯುವ ಮುಖಂಡರಾದ ಬಾಪುಗೌಡ ಬಿರಾಳ್,, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಚಂದ್ರಶೇಖರ ಹರನಾಳ್, ಶಾಂತಪ್ಪ ಕೂಡಲಗಿ, ವಿಜಯಕುಮಾರ್ ಕಲ್ಲಾ, ಷಣ್ಮುಖಪ್ಪ ಈರೇಗೌಡ, ನಗರ ಘಟಕ ಅಧ್ಯಕ್ಷ ರವೀಂದ್ರ ಕೊಳಕುರ್, ಸಾಹಿತಿಗಳಾದ ವಿಜಯಕುಮಾರ್ ಬಿರಾದಾರ್, ಸದಾನಂದ್ ಪಾಟೀಲ್, ಅಖಂಡು ಶಿವನಿಣ್ಣಿಕರ್, ಎಚ್ ಮಾಲಿ ಪಾಟೀಲ್, ಸಂಗನಗೌಡ ಪಾಟೀಲ್ ರದ್ದೇವಾಡಗಿ, ವಿಜಯಕುಮಾರ್ ಪಾಟೀಲ್ ಸೇಡಂ, ಚಂದ್ರಶೇಖರ್ ತುಂಬಿಗಿ, ಪ್ರಕಾಶ್ ಪುಲಾರೆ, ಭಗವಂತರಾಯ ಬೆಣ್ಣೂರ್, ತಾಲ್ಲೂಕು ವಕೀಲರ ಸಂಘದ ಕಾರ್ಯದರ್ಶಿ ರಾಜಶೇಖರ್ ಶಿಲ್ಪಿ, ಶ್ರೀಹರಿ ಕರ್ಕಳ್ಳಿ, ರವಿ ಕುಳಗೇರಿ, ರವಿಚಂದ್ರ ಗುತ್ತೇದಾರ್, ಮಲ್ಲೇಶಪ್ಪ ಗೌಡ ರೇವನೂರ್, ತಾಲ್ಲೂಕು ವಕೀಲರ ಸಂಘದ ಉಪಾಧ್ಯಕ್ಷ ಭಾಷೆ ಪಟೇಲ್ ಮಾಲಿ ಪಾಟೀಲ್ ಯಾಳವಾರ್, ಭೀಮು ಖಾದ್ಯಪೂರ್, ಗುರು ಜೈನಪುರ, ಗಿರೀಶ್ ತುಂಬಗಿ, ಬಸವರಾಜ್ ಲಾಡಿ ನಾಗರಾಜ್ ಅಲಗೂರ್, ಕಾಂತಪ್ಪ ಚನ್ನೂರ್ ಮುಂತಾದವರು ಉಪಸ್ಥಿತರಿದ್ದರು.

# ಉದ್ರಿಕ್ತರಿಂದ ಪ್ರತಿಭಟನೆ: 50,000ರೂ.ಗಳ ಪರಿಹಾರ

ಜೇವರ್ಗಿ: ಪಟ್ಟಣದ ಬಸ್ ನಿಲ್ದಾಣದಲ್ಲಿ ಬಸ್ ಹರಿದು ಕಸಗೂಡಿಸುತ್ತಿದ್ದ ಮಹಿಳೆಯೊಬ್ಬಳು ಸ್ಥಳದಲ್ಲಿಯೇ ಮೃತಪಟ್ಟ ಘಟನೆ ಸೋಮವಾರ ಬೆಳಿಗ್ಗೆ ಸಂಭವಿಸಿದೆ. ಮೃತಳನ್ನು ಮಾನಮ್ಮ ಗಂಡ ಚಂದ್ರಕಾಂತ ಜೇವರ್ಗಿ (50) ಎಂದು ಗುರುತಿಸಲಾಗಿದೆ.

ಸುಮಾರು ವರ್ಷಗಳಿಂದ ಕಸಗುಡಿಸುತ್ತಿದ್ದ ಮಾನಮ್ಮಳಿಗೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ ಬಸ್ಸು ಮಹಿಳೆ ಮೇಲೆ ಕಾಳಗಿ ಡಿಪೋಕ್ಕೆ ಸೇರಿದ ಬೆಂಗಳೂರಿನಿಂದ ಕಲಬುರ್ಗಿ ಬರುತ್ತಿದ್ದ ಬಸ್ಸು ಡಿಕ್ಕಿ ಹೊಡೆದ ಪರಿಣಾಮ ಮಹಿಳೆ ಸ್ಥಳದಲ್ಲಿಯೇ ಸಾವನ್ನಪ್ಪಿದಳು.

ಸುದ್ದಿ ತಿಳಿದು ಸ್ಥಳದಲ್ಲಿ ನೂರಾರು ಜನರು ಸೇರಿದರು. ರಾಷ್ಟ್ರೀಯ ಹೆದ್ದಾರಿ ಬಳಿ ಇರುವ ಬಸ್ ಡಿಪೋ ಎದುರು ಶವ ಇಟ್ಟು ಉದ್ರಿಕ್ತರು ಪ್ರತಿಭಟಿಸಿದರು. ಮೃತಳ ಸಂತ್ರಸ್ತ ಕುಟುಂಬದ ಸದಸ್ಯರೊಬ್ಬರಿಗೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ



ಉದ್ಯೋಗ ನೀಡುವಂತೆ, ಸೂಕ್ತ ಪರಿಹಾರ ನೀಡುವಂತೆ ಹಾಗೂ ಸಾವಿಗೆ ಕಾರಣರಾದವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಪ್ರತಿಭಟನೆಕಾರರು ಒತ್ತಾಯಿಸಿದರು.

ಡಿಪೋ ಮ್ಯಾನೇಜರ್ ಕೃಷ್ಣ ನಾಯಕ್ ಹಾಗೂ ಬಸ್ ನಿಲ್ದಾಣದ ನಿಯಂತ್ರಕ ಶಂಕರ್ ಕೊಂಡಗೂಳಿ ಅವರಿಗೆ ಮನವಿ ಪತ್ರವನ್ನು ಸಲ್ಲಿಸಿದರು. ಇಲಾಖೆಯಿಂದ ಸಂತ್ರಸ್ತ ಕುಟುಂಬಕ್ಕೆ 50,000ರೂ.ಗಳ ಪರಿಹಾರ ನೀಡಲಾಯಿತು. ಈ ಸಂದರ್ಭದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಸೇನೆ ಅಧ್ಯಕ್ಷ ತಮ್ಮಣ್ಣ ಬಾಗೇವಾಡಿ, ಮಾದಿಗ ಸಮಾಜದ ಮುಖಂಡ ಮಲ್ಲಿಕಾರ್ಜುನ್ ದಿನ್ನಿ, ಮಾನಪ್ಪ ಗೋಗಿ ಬಾಗೇವಾಡಿ, ಈಶ್ವರ ಹಿಪ್ಪರಗಿ ಭೀಮರಾಯ ಹಳ್ಳಿ, ಮಹಾಂತೇಶ್ ಹಾದಿಮನಿ, ಭೀಮು ಆಳಂದಕರ್, ಭೀಮು ಖಾದ್ಯಪುರ, ಮರೆಪ್ಪ ದೊಡಮನಿ, ಬಾಲರಾಜ್ ನಾಕಮನ್, ಸೋಮರಾಯ್ ಡೊಳ್ಳೆ, ಬಾಬು ಡೊಳ್ಳೆ, ಪರಶುರಾಮ್ ಡೊಳ್ಳೆ, ಸಾಬು ಡೊಳ್ಳೆ, ಶೇಖರ್ ಕೋಬಾಳ್, ನಿಖಿಲ್ ಬುಳ್ಳಾ, ಈಸು ಕುಂಟನೂರ್, ಅಮರೇಶ್ ಕೊಡಚಿ ಮುಂತಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.ಈ ಕುರಿತು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗುವುದು ಎಂದು ಪಿಎಸ್‌ಐ ಗಜಾನಂದ್ ಬಿರಾದಾರ್ ಅವರು ತಿಳಿಸಿದ್ದಾರೆ.

# ಭೀಮರತ್ನ ಪ್ರಶಸ್ತಿಗೆ ಪತ್ರಕರ್ತ ಮರೆಪ್ಪ ಬೇಗಾರ್ ಆಯ್ಕೆ

ಜೇವರ್ಗಿ: ಪಟ್ಟಣದ ಬುಗ್ಗಿ ನಗರದ ಧರ್ಮಸಿಂಗ್ ಬಡಾವಣೆಯಲ್ಲಿ ಇದೇ ಏಪ್ರಿಲ್ 28ರಂದು ಮಂಗಳವಾರ ಸಂಜೆ 5 ಗಂಟೆಗೆ ಭಾರತರತ್ನ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವ ಹಮ್ಮಿಕೊಂಡಿದ್ದು, ಗ್ರಾಮ ಪಂಚಾಯಿತಿ ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷ ಹಾಗೂ ಕರ್ನಾಟಕ ಜರ್ನಲಿಸ್ಟ್ ಯೂನಿಯನ್ ತಾಲ್ಲೂಕು ಅಧ್ಯಕ್ಷ ಮರೆಪ್ಪ ಬೇಗಾರ್ ಅವರಿಗೆ ಇದೇ ಸಂದರ್ಭದಲ್ಲಿ ಭೀಮರತ್ನ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುವುದು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮ ವಾದ ತಾಲ್ಲೂ ಸಂಚಾಲಕ ಹಾಗೂ ಭೀಮ ವಾದ ಸುದ್ದಿ ವರದಿಗಾರ ರವಿಕುಮಾರ ಎಮ್. ವೀರನಹಳ್ಳಿ ಅವರು ತಿಳಿಸಿದ್ದಾರೆ.

ಉದ್ಘಾಟನೆಯನ್ನು ಕ್ಷೇತ್ರದ ಶಾಸಕರೂ ಆಗಿರುವ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷ ಅಜಯಸಿಂಗ್ ಧರ್ಮಸಿಂಗ್ ಅವರು ನೆರವೇರಿಸುವರು. ಮಾಜಿ ಶಾಸಕ ಹಾಗೂ ಜೆಡಿಎಸ್ ರಾಜ್ಯ ಕಾರ್ಯಾಧ್ಯಕ್ಷ ದೊಡ್ಡಪ್ಪಗೌಡ ಪಾಟೀಲ್ ನರಿಬೋಳ್ ಅವರು ಜ್ಯೋತಿ ಬೆಳಗಿಸುವರು. ಅಧ್ಯಕ್ಷತೆಯನ್ನು ಸಮಿತಿಯ ಸಂಸ್ಥಾಪಕ ಪರಶುರಾಮ್ ನೀಲನಾಯಕ್ ಡಿ., ಅವರು ವಹಿಸುವರು ಎಂದು ಅವರು ಹೇಳಿಕೆಯಲ್ಲಿ ವಿವರಿಸಿದ್ದಾರೆ. ಭಾವಚಿತ್ರಕ್ಕೆ ಮಾಲಾರ್ಪಣೆಯನ್ನು ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಚಂದ್ರಶೇಖರ್ ಹರನಾಳ್, ಕಾಂಗ್ರೆಸ್ ಹಿರಿಯ ಮುಖಂಡ ರಾಜಶೇಖರ್ ಸೀರಿ, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಶಾಂತಪ್ಪ ಕೂಡಲಗಿ, ದಲಿತ ಹಿರಿಯ ಮುಖಂಡ ಸುಭಾಷ ಚನ್ನೂರ್ ಅವರು ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಎಮ್.ಡಿ. ರೌಫ ಹವಾಲ್ದಾರ್ ಭಾವೈಕ್ಯತೆ ಸೇವಾ ಸಂಸ್ಥೆ ಅಧ್ಯಕ್ಷ ಭಗವಂತರಾಯ ಬೆಣ್ಣೂರ್, ಮಾಜಿ ಪುರಸಭೆ ಅಧ್ಯಕ್ಷ ಶರಣು ಗುತ್ತೇದಾರ್, ತಾಲ್ಲೂಕು ವಕೀಲರ ಸಂಘದ ಕಾರ್ಯದರ್ಶಿ, ಬೌದ್ಧ ಮಹಾ ಸಭಾ ಉಪಾಧ್ಯಕ್ಷರಾದ ಹಾಗೂ ತಾಲ್ಲೂಕು ನೋಟರಿ ವಕೀಲರಾದ ರಾಜಶೇಖರ್ ಶಿಲ್ಪ, ಶಿವಶರಣ ಹಳ್ಳಿಮನಿ, ರಾಜೇಶ್ವರ ಪಾಂಡುರಂಗ ಸಾಹುಕಾರ, ಬಿಜೆಪಿ ಯುವ ಮುಖಂಡ ಸುರೇಶ್ ಪಾಟೀಲ್ ನೇದಲಗಿ, ಯುವ ಕಾಂಗ್ರೆಸ್ ಅಧ್ಯಕ್ಷ ರಿಯಾಜ್ ಪಟೇಲ್ ಖಾಸೀಮ ಪಟೇಲ್, ಕಾಂಗ್ರೆಸ್ ಮುಖಂಡ ಗುರು ಜೈನಾಪೂರ್, ಸಂತೋಷ ಜೈನಾಪೂರ್,ಸಂತೋಷಗೌಡ ಮಾಲಿಪಾಟೀಲ್, ಪಂಚಯ್ಯ ಹಿರೇಮಠ, ಸಿದ್ದಲಿಂಗ ಹೆಚ್. ಪೂಜಾರಿ, ಮಲ್ಲಿಕಾರ್ಜುನ ಚನ್ನೂರ್, ರೇಣುಕಾ ಗಾಯಕವಾಡ್ ಮುಂತಾದವರು ಆಗಮಿಸುವರು ಎಂದು ಅವರು ತಿಳಿಸಿದ್ದಾರೆ.

ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಅಂಬೇಡ್ಕರ್ ಅವರ ಅನುಯಾಯಿಗಳು, ಪ್ರಗತಿಪರ ಚಿಂತಕರು ಪಾಲ್ಗೊಳ್ಳಬೇಕು ಎಂದು ಅವರು ಕೋರಿದ್ದಾರೆ.

# ಜಿಲ್ಲಾ ಮಟ್ಟದ ಮಕ್ಕಳ ಬೇಸಿಗೆ ಶಿಬಿರಕ್ಕೆ ಚಾಲನೆ

ಬೀದರ್: ರಾಜ್ಯ ಬಾಲ ಭವನ ಸೊಸೈಟಿ ಬೆಂಗಳೂರು, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಬಾಲ ಭವನ ಸಮಿತಿ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಮಕ್ಕಳ ಬೇಸಿಗೆ ಶಿಬಿರದ ಉದ್ಘಾಟನಾ ಕಾರ್ಯಕ್ರಮವು ಸೋಮವಾರ ಬೆಳಿಗ್ಗೆ 10:30ಕ್ಕೆ ಜಿಲ್ಲಾ ಬಾಲ ಭವನ ಸಮಿತಿ ಸಭಾಂಗಣದಲ್ಲಿ ನೆರವೇರಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಶ್ರೀಮತಿ ಶಾರದಾ ಕಲ್ಮಲ್ಕರ್ ಅವರು ಮಕ್ಕಳೊಂದಿಗೆ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿ, ಪ್ರತಿವರ್ಷದಂತೆ ಈ ವರ್ಷವೂ 5 ರಿಂದ 16 ವರ್ಷದೊಳಗಿನ ಮಕ್ಕಳಿಗಾಗಿ ವಿವಿಧ ತರಬೇತಿ ಚಟುವಟಿಕೆಗಳನ್ನು ಉಚಿತವಾಗಿ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಶಿಬಿರದಲ್ಲಿ ಮಕ್ಕಳ ಸೃಜನಾತ್ಮಕತೆ ಮತ್ತು ವ್ಯಕ್ತಿತ್ವ ವಿಕಾಸಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಚಿತ್ರಕಲೆ, ಕರಕುಶಲೆ, ಜೇಡಿ ಮಣ್ಣಿನ ಕಲೆ, ಕರಾಟೆ, ಯೋಗ ಮತ್ತು ಧ್ಯಾನ, ಸಮೂಹ ನೃತ್ಯ ಹಾಗೂ ನಾಟಕ ಮುಂತಾದ ಚಟುವಟಿಕೆಗಳಿಗೆ ಅನುಭವಿ ಸಂಪನ್ಮೂಲ ಬೋಧಕರಿಂದ ಉಚಿತ ತರಬೇತಿ ನೀಡಲಾಗುತ್ತಿದೆ. ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಂಗವಿಕಲರ ಕಲ್ಯಾಣ ಅಧಿಕಾರಿ ಶ್ರೀ ಶುಭಾಷ್ ರತ್ನ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕರಕುಶಲೆ ಮತ್ತು ನಾಟಕ ತರಬೇತಿದಾರ ಮಹೇಶ್ ಧೂಪೆ, ನೃತ್ಯ ತರಬೇತಿದಾರ ಕು. ನೇಹಾ ಕಾಂಬ್ಳೆ, ಕರಾಟೆ ಮತ್ತು ಯೋಗ ತರಬೇತಿದಾರ ಕು. ಸುದೇಶ್ ಮೋರೆ, ಚಿತ್ರಕಲೆ ಮತ್ತು ಜೇಡಿ ಮಣ್ಣಿನಕಲೆ ತರಬೇತಿದಾರ ದೇವಿಂದ್ರ ಮಾಳಗೆ ಮುಂತಾದವರು ಉಪಸ್ಥಿತರಿದ್ದರು.

# ಸೃಜನಶೀಲ ಪ್ರತಿಭೆ ಸಾಹಿತಿ ಸುಧಾ ಪಾಟೀಲ

■ ಉದಯರಶ್ಮಿ ದಿನಪತ್ರಿಕೆ

ಉತ್ತರ ಕರ್ನಾಟಕದ ದೇಸಿ ಪ್ರಜ್ಞೆಯನ್ನು ಮೇಳೈಸಿಕೊಂಡು ಗದಗ ಜಿಲ್ಲೆಯ ಮಲ್ಲಸಮುದ್ರದ ಗೌಡರ ಮಗಳು ಸುಧಾ ಪಾಟೀಲ ಮೆಲ್ಲ ಮೆಲ್ಲನೆ

ಬೆಳೆದು ನಿಂತ ಅಪ್ಪಟ ಸೃಜನಶೀಲ ಪ್ರತಿಭೆ. ತಂದೆ ಲಿಂಗೈಕ್ಯ ಭೀಮನಗೌಡರು ತಾಯಿ ಅಕ್ಕ ಮಹಾದೇವಿ ಅತ್ಯಂತ ಸುಸಂಸ್ಕೃತ ಮನೆತನದ ಹುಡುಗಿ.ಇವರು ಗದಗ ಜಿಲ್ಲೆಯ ಮಲ್ಲಸಮುದ್ರದ ಸಹಕಾರಿ ಧುರೀಣರೆಂದೇ ಹೆಸರಾದ ಗೌಡರ ಮನೆತನದಲ್ಲಿ 17 –5–1966 ರಂದು ಜನಿಸಿದರು

ಪ್ರಾಥಮಿಕ ಮತ್ತು ಹೈಸ್ಕೂಲ್ ಶಿಕ್ಷಣವನ್ನು ಗದಗ, ಬಿಜಾಪುರ, ಧಾರವಾಡ, ಬೆಳಗಾವಿ, ಕಲ್ಬುರ್ಗಿ ಮತ್ತು ಬೆಂಗಳೂರಿನಲ್ಲಿ ಪೂರೈಸಿ, ಅಲ್ಲಿಯೇ ಗೃಹ ವಿಜ್ಞಾನ ಕಾಲೇಜಿನಲ್ಲಿ ಸೈಕಾಲಜಿ, ಸೋಶಿಯಲ್ ವೆಲ್ಫೇರ್ ಮತ್ತು ಹ್ಯೂಮನ್ ಡೆವಲಪ್ಮೆಂಟ್ ಗಳ

ವಿಷಯಗಳನ್ನು ಆಯ್ದುಕೊಂಡು ಡಿಗ್ರಿ ಮುಗಿಸಿದರು.

ಕನ್ನಡ ಸಾರಸ್ವತ ಲೋಕದಲ್ಲಿ ಕಥೆ ಕವನ ವ್ಯಕ್ತಿ ಪರಿಚಯ ಅಂಕಣ ಶರಣ ಚರಿತ್ರೆ ವಿಮರ್ಶೆ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಸೈ ಎನಿಸಿಕೊಂಡ ಈಗ ಬೆಳಗಾವಿಯ ಅನೇಕ ಸಾಹಿತಿಕ ಸಾಂಸ್ಕೃತಿ–ಕ ಸಂಘಟನೆಗಳಲ್ಲಿ ಪದಾಧಿಕಾರಿಯಾಗಿ ಸಕ್ರಿಯವಾಗಿ ಕನ್ನಡ ನಾಡು ನುಡಿ ಸಂಸ್ಕೃತಿ ವಚನ ಚಳುವಳಿಗಾಗಿ ಶ್ರಮಿಸುತ್ತಿದ್ದಾರೆ. ಇವರು ಬಸವ ತಿಳುವಳಿಕೆ ಸಂಶೋಧನಾ ಕೇಂದ್ರದ ವಿಶ್ವಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ವಚನ ಸಾಹಿತ್ಯದ ಗೀಳು ಮತ್ತು ಅಧ್ಯಯನ

ಸುಧಾ ಪಾಟೀಲ ಅವರಿಗೆ ಬಾಲ್ಯದಲ್ಲಿಯೇ ಡಾ. ಜ.ಚ.ನಿ ಅವರಿಂದ ಲಿಂಗ ದೀಕ್ಷೆಯಾಗಿತ್ತು. ತಾಯಿ ಅಕ್ಕಮಹಾದೇವಿ ಆಧುನಿಕ ಕಾಲದ ಶರಣೆ. ನಿತ್ಯ ವಚನ ಸಾಹಿತ್ಯ ಚಿಂತನೆ ಮಗಳಾದ ಸುಧಾ ಅವರ ಮೇಲೆ ದಟ್ಟವಾಗಿ ಬೀರಿದೆ.

ಸುಧಾ ಪಾಟೀಲ ಒಬ್ಬ ಅತ್ಯಂತ ಸೂಕ್ಷ್ಮ ಸಂವೇದನೆಯ ಕವಯಿತ್ರಿ, ಲೇಖಕಿ. ಇವರು ಸಾಮಾಜಿಕ ಕಳಕಳಿಯುಳ್ಳ ಚಿಂತಕಿ. ಕಾವ್ಯ, ಕೇಂದ್ರೀಕೃತ ಕಲ್ಪನಾತ್ಮಕತೆಯನ್ನು ಹುಟ್ಟುಹಾಕುವ ಸಾಹಿತ್ಯಅರ್ಥ,ಧ್ವನಿ ಮತ್ತು ಲಯಕ್ಕೆ ಅನುಗುಣವಾಗಿ ಆಯ್ಕೆಮಾಡಿದ ಮತ್ತು ಜೋಡಿಸಲಾದ ಭಾಷೆಯ



ಮೂಲಕ ಅನುಭವದ ಅರಿವು ಅಥವಾ ನಿರ್ದಿಷ್ಟ ಭಾವನಾತ್ಮಕ ಪ್ರತಿಕ್ರಿಯೆ . ಈಗಾಗಲೇ ಆರು ಕವನ ಸಂಕಲನಗಳನ್ನು ರಚಿಸಿ ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸಿದ್ದಾರೆ. ಇವರು ತಮ್ಮ ಕವನ, ಕಥೆಗಳಲ್ಲಿ ತಮ್ಮ ಸುತ್ತಲಿನ ಅನೇಕ ಸಿಹಿ ಕಹಿ ಘಟನೆಗಳನ್ನು ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಕವನ,ಕಾವ್ಯ, ಕಥೆ–',ಹೀಗೆ ಎಲ್ಲ ವಿಶಿಷ್ಟ ಪ್ರಕಾರದ ಸಾಹಿತ್ಯದಲ್ಲಿ ತಮ್ಮದೇ ಆದ ಛಾಪನ್ನು ಮೆರೆದಿದ್ದಾರೆ. ಇವರ ಬರಹಗಳು ಸ್ವಂತಿಕೆಯ ಜೊತೆಗೆ ಪ್ರಬುದ್ಧ ಅಭಿವ್ಯಕ್ತಿ.

ಇವರ ಕವನ ಸಂಕಲದಲ್ಲಿ ಸೃಷ್ಟಿಯ ಕಾಳಜಿ, ಪರಿಸರ ಪ್ರಜ್ಞೆ, ಮಾನವ ಮೌಲ್ಯಗಳನ್ನು ಎತ್ತಿ ಹಿಡಿಯುವ ಪ್ರಯತ್ನ, ಸಾಮಾಜಿಕ ಧಾರ್ಮಿಕ ಸಾಮರಸ್ಯತೆಗೆ ಒತ್ತು ಕೊಟ್ಟಿದ್ದಾರೆ. ಜೊತೆಗೆ ಸ್ನೇಹ, ಪ್ರೀತಿಯು ಇವರ ಕಾವ್ಯದ ಮೂಲ ದ್ರವ್ಯವೆಂದು ಹೇಳಬಹುದು.

ಇವರ ಇನ್ನೂ ಹತ್ತಾರು ಕೃತಿಗಳು ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಣೆಗೊಳ್ಳಲಿ ಎಂದು ಪತ್ರಿಕೆ ಹಾರೈಸುತ್ತದೆ.

## ಸುಧಾ ಪಾಟೀಲ ರ ಪ್ರಕಟಿತ ಕೃತಿಗಳು

**ಕಿರುಹೊತ್ತಿಗೆಗಳು**
1..ಡಾ. ಜ. ಚ. ನಿ (ಸಂಗ್ರಹ )

**ಬದುಕು ಬರಹ**
**ಸಂಪಾದನೆ**
1.. ವಚನಗಳಲ್ಲಿ ಗುರು ಲಿಂಗಜಂಗಮ
2..ಅನುಭವ ಸಿರಿ
3.. ಕನ್ನಡದ ಕಬ್ಬಿಗರು
4.. ದಾಸೋಹಮ
5.. ಸಂಯುಕ್ತ
6..ತಾಯಿಯಿದ್ದರೆ ತವರೆಚ್ಚು
7.. ದಿನಕ್ಕೊಂದು ಶರಣ ಮಾಲಿಕೆ – 1
8..ದಿನಕ್ಕೊಂದು ಶರಣ ಮಾಲಿಕೆ – 2
9..ದಿನಕ್ಕೊಂದು ಶರಣ ಮಾಲಿಕೆ – 3
10..ದಿನಕ್ಕೊಂದು ಶರಣ ಮಾಲಿಕೆ – 4
11 ದಿನಕ್ಕೊಂದು ಶರಣ ಮಾಲಿಕೆ – 5

**ಕವನ ಸಂಕಲನಗಳು**
1.. ಹೆಜ್ಜೆ ಗುರುತು
2.. ಹೃದಯದ ಮಾತು
3..ಚುಕ್ಕಿ ಹೇಳಿದ ಕಥೆ
4..ಬೊಗಸೆಯೊಳಗಿನ ಪ್ರೀತಿ
5..ವಚನ ಸುಧೆ
6...ಮುಗಿಲಿಗೆ ಏಣಿ
7 ನಕ್ಕು ಬಿಡಲಿ ಭೂಮಿ

ಗದ್ಯ ಕೃತಿಗಳು
1..ಶರಣರ ನೆನೆದರ ಸರಗಿಯ ಇಟ್ಟಂಗ
2..ವಚನ ದಿವ್ಯ
3..ತೊಟ್ಟಿಲು ತೂಗುವ ಕೈ
4..ತವರೂರ ದಾರಿಯಲಿ

## ಪ್ರಶಸ್ತಿ - ಪುರಸ್ಕಾರಗಳು

1.. ರಾಜ್ಯೋತ್ಸವ ಪ್ರಶಸ್ತಿ..
ಚೇತನಾ ಫೌಂಡೇಶನ್ ಅವರ ವತಿಯಿಂದ...
ಕನ್ನಡ ಪರ ಕಾಳಜಿ ಮತ್ತು ಸಾಮಾಜಿಕ ಕಾರ್ಯಗಳಿಗಾಗಿ ಸಂದ ಪ್ರಶಸ್ತಿ
2.. ಅನುಪಮ ಸೇವಾ ರತ್ನ ಪ್ರಶಸ್ತಿ...ಪೃಥ್ವಿ ಫೌಂಡೇಶನ್ ವತಿಯಿಂದ...
ಸಾಹಿತ್ತಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿಗೈದ ಅಪರಿಮಿತ ಸಾಧನೆಗಾಗಿ
3.. ಮಿನರ್ವ ಅವಾರ್ಡ್
ಅಖಿಲ ಭಾರತ ಕವಿಯಿತ್ರಿಯರ ಸಮ್ಮೇಳನ (ಯುರೋಪ್ ಖಂಡದ ರೋಮ್ ನಲ್ಲಿ )
ಅಂತರಾಷ್ಟೀಯ ಸಮ್ಮೇಳನದಲ್ಲಿ ಕವನವಾಚನ
4..ದತ್ತಿನಿಧಿ ಪ್ರಶಸ್ತಿ
ಅಖಿಲ ಭಾರತ ಕವಿಯಿತ್ರಿಯರ ಸಮ್ಮೇಳನ ( ಬೆಳಗಾವಿ )
ಸಾಮಾಜಿಕ ಕಾರ್ಯಕ್ಕಾಗಿ..
5... ಬಸವ ಪ್ರಶಸ್ತಿ –
ಅಖಿಲ ಕರ್ನಾಟಕ ಬಸವ ಬಳಗ ಹುಬ್ಬಳ್ಳಿ
ಸಾಮಾಜಿಕ ಕಾರ್ಯ ಮತ್ತು ಮಹಿಳಾ ಸಂಘಟನೆಯಲ್ಲಿ ಅನುಪಮ ಸೇವೆಗಾಗಿ..
6.. ಹೆಜ್ಜೆ ಗುರುತು – ಕವನ ಸಂಕಲನ ಪುಸ್ತಕಕ್ಕೆ ದತ್ತಿ ಪ್ರಶಸ್ತಿ – ಅಖಿಲ ಭಾರತ ಕವಿಯಿತ್ರಿಯರ ಸಮ್ಮೇಳನ ( ಶಿವಮೊಗ್ಗ )
7..ಹೆಜ್ಜೆ ಗುರುತು –ಕವನ ಸಂಕಲನ ಪುಸ್ತಕಕ್ಕೆ ಕವಿ ಡಾ. ಡಿ. ಎಸ್. ಕರ್ಕಿ ಪ್ರಶಸ್ತಿ –ಬೆಳಗಾವಿ
8..ಅಪ್ರತಿಮ ಮಹಿಳೆ – ಕೃತಿಗೆ ಆಸ್ಸಾಂ ನಲ್ಲಿ ನಡೆದ ಅಖಿಲ ಭಾರತ ಕವಯತ್ರಿಯರ ಸಮ್ಮೇಳನದಲ್ಲಿ ದತ್ತಿ ಪ್ರಶಸ್ತಿ
9 ಸೌತ್ ಇಂಡಿಯಾ ವಿಮೆನ್ ಅಚೀವರ್ಸ್ ಅವಾರ್ಡ್ ಚೆನ್ನೈ 2026

## ಏ.25 ರಂದು ಬಸವ ಸೇವಾ ಪ್ರಶಸ್ತಿ ಪ್ರದಾನ



ಸುಧಾ ಪಾಟೀಲ ತಮ್ಮ ಬರವಣಿಗೆಯಲ್ಲಿ ಹೊಸ ಪ್ರಯೋಗದೊಂದಿಗೆ ಹೊಸತನದ ಹುಡುಕಾಟವನ್ನು ನಡೆಸಿದ್ದಾರೆ. ತಮ್ಮ ಸ್ನೇಹಪರ ಮಾತೃ ಹೃದಯದ ಮಾನವ ಪ್ರೀತಿ ಕಾಳಜಿ ಅಪಾರವಾದವು. ಇವರ ಸಾಹಿತ್ತಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸೇವೆ ಗುರುತಿಸಿ ಇವರಿಗೆ ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ ಪುಣೆ ಇದರ ವತಿಯಿಂದ ಬಸವ ಸೇವಾ ಪ್ರಶಸ್ತಿಯನ್ನು ವಿಜಯಪುರದಲ್ಲಿ ದಿನಾಂಕ 25 ಏಪ್ರಿಲ್ ರಂದು ಬೆಳಿಗ್ಗೆ 10 ಗಂಟೆಗೆ ವಿಜಯಪುರದ ಹೇಮರಡ್ಡಿ ಮಲ್ಲಮ್ಮ ಕಲ್ಯಾಣ ಮಂಟಪ ಸಭಾಭವನದಲ್ಲಿ

ಡಾ ಅಶೋಕ ಆಲೂರ ಕುಲಪತಿಗಳು ಕೊಡಗು ವಿಶ್ವ ವಿದ್ಯಾಲಯ ಮತ್ತು ಡಾ ಅಜಿತ್ ರಾಂಪುರೆ ಅಂತರಾಷ್ಟೀಯ ವೈದ್ಯರು ಕೆನಡಾ ಇವರ ಸಮ್ಮುಖದಲ್ಲಿ ಪ್ರದಾನ ಮಾಡಲಾಗುವುದು ಎಂದು ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರದ ಅಧ್ಯಕ್ಷ ಡಾ.ಶಶಿಕಾಂತ ಪಟ್ಟಣ ತಿಳಿಸಿದ್ದಾರೆ.

## ಸಾಧಕರು



## ಸೈವೆಗೈದ ಸಂಘ - ಸಂಸ್ಥೆಗಳು

1..ಬಸವ ತಿಳುವಳಿಕೆ ಮತ್ತು ಅಧ್ಯಯನ ಕೇಂದ್ರ.. ಪುಣೆ
2.. ಬೆಳಗಾವಿ ಜಿಲ್ಲಾ ಲೇಖಕಿಯರ ಸಂಘ
3.. ಬೆಳಗಾವಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್
4.. ಲಿಂಗಾಯತ ಮಹಿಳಾ ಸಮಾಜ
5.. ಅಖಿಲ ಭಾರತ ಕವಿಯಿತ್ರಿಯರ ಸಮ್ಮೇಳನ
6.. ಅಖಿಲ ಭಾರತ ವೀರಶೈವ ಮಹಾಸಭಾ
7.. ಬೆಳಗಾವಿ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್
8..ಕಾಯಕಕಟ್ಟೆ(ಲಿಂಗಾಯತ ಮಹಿಳಾ ಸ್ವಉದ್ಯೋಗ ಸಂಘ )
9.. ವಿಸ್ತಾರ ಫೌಂಡೇಶನ್ (ಸಾಮಾಜಿಕ ಕಾರ್ಯಕ್ರಮ ಬೆಳಗಾವಿ ಶಾಖೆ )
10.. ಮೈತ್ರಿ ಸಂಘ
11.. ಸಂಸ್ಕೃತಿ ಮಹಿಳಾ ಮಂಡಲ
12.. ಬೆಳಗಾವಿ ಲೇಡೀಸ್ ಮೀಟ್
13..ಕರ್ನಾಟಕ ಲೇಖಕಿಯರ ಸಂಘ
14..ರೋಷ್ಣಂ ಡೈರೀಸ್



ಲೇಖನ

■ ಡಾ. ಶಶಿಕಾಂತ ಪಟ್ಟಣ
ಸಾಹಿತಿಗಳು, ವಿಮರ್ಶಕರು
ರಾಮದುರ್ಗ – ಪುಣೆ

# ಅಧಿಕಾರ ಯಾವಾಗಲೂ ಜನಪರವಾಗಿರಬೇಕು : ಶಾಸಕಮನಗೂಳಿ



■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ಬಾಬಾಸಾಹೇಬರು ನೀಡಿರುವ ಸಂವಿಧಾನದಡಿಯಲ್ಲಿ ನಾವೆಲ್ಲರೂ ಕಾರ್ಯನಿರ್ವಹಿಸಬೇಕು. ಅಧಿಕಾರ ಯಾವಾಗಲೂ ಜನಪರವಾಗಿರಬೇಕು. ಅಧಿಕಾರ ಎನ್ನುವುದು ಸೇವೆ ಎಂಬ ಮನೋಭಾವದಿಂದ ಕೂಡಿರಬೇಕು ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಸಿಂದಗಿ ತಾಲೂಕಿನ ಗಬಸಾವಳಗಿ ಗ್ರಾಮದಲ್ಲಿ ನಡೆದ 2025–26 ಸಾಲಿನ ಮುಖ್ಯಮಂತ್ರಿ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಶ್ರೀ ಸಿದ್ರಾಮೇಶ್ವರ ದೇವಸ್ಥಾನ ಹತ್ತಿರ ರೂ.25ಲಕ್ಷ ಮೊತ್ತದ ಸಮುದಾಯ ಭವನದ ಕಾಮಗಾರಿಗೆ ಭೂಮಿ ಪೂಜೆಯನ್ನು ನೆರವೇರಿಸಿ ಮಾತನಾಡಿದ ಅವರು, ಶರಣ–ರ, ಸಂತರ, ಸ್ವಾತಂತ್ರ್ಯ ಹೋರಾಟಗಾರರ ಹಾಗೂ ದಾರ್ಶನಿಕರ ಆಚಾರ, ವಿಚಾರ, ಸಂಪ್ರದಾಯ ಮತ್ತು ತತ್ವಾದರ್ಶಗಳನ್ನು ಮುಂದಿನ ಯುವ ಪೀಳಿಗೆಗೆ ವರ್ಗಾವಣೆಯಾಗಬೇಕಾದರೆ ಗ್ರಾಮೀಣ ಪ್ರದೇಶಗಳಲ್ಲಿ ಕಾಲಕ್ಕೆ ಅನುಗುಣವಾಗಿ ಪುರಾಣ–ಪ್ರವಚನ, ಉಪನ್ಯಾಸಗಳು ನಡೆಯಬೇಕು. ಗ್ರಾಮದ ಅಭಿವೃದ್ಧಿಗಾಗಿ ಸದಾ ಶ್ರಮಿಸುತ್ತೇನೆ. ಶ್ರೀ ಸಿದ್ರಾಮೇಶ್ವರ ದೇವಸ್ಥಾನ ಜಿರ್ಣೋದ್ಧಾರಕ್ಕೆ ಗ್ರಾಮಸ್ಥರ ಈಗಾಗಲೇ ರೂ.70ಲಕ್ಷ ಹಣವನ್ನು ದೇಣಿಗೆಯ ಮೂಲಕ ಸಂಗ್ರಹಣೆ ಮಾಡಿ 14 ನಿವೇಶನಗಳನ್ನು ಖರೀದಿ ಮಾಡಿದ್ದಾರೆ. ಮುಖ್ಯಮಂತ್ರಿ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಶ್ರೀ ಸಿದ್ರಾಮೇಶ್ವರ ದೇವಸ್ಥಾನ ಹತ್ತಿರ ರೂ.25ಲಕ್ಷ ಮೊತ್ತದ ಸಮುದಾಯ ಭವನದ ಕಾಮಗಾರಿಗೆ ಮೀಸಲಿಡಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಶಾಸಕ ಅಶೋಕ ಮನಗೂಳಿ ಅವರಿಗೆ ಗ್ರಾಮಸ್ಥರು ಅದ್ದೂರಿ ಮೆರವಣಿಗೆ ಮೂಲಕ ಸ್ವಾಗತಿಸಿಕೊಂಡರು. ಕಾರ್ಯಕ್ರಮದಲ್ಲಿ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡದಿರುವ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಮಾಜಿ ಜಿಪಂ ಸದಸ್ಯರು ನರಸಿಂಗ ಪ್ರಸಾದ ತಿವಾರಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಪೂಜಾರಿ, ಕೆಡಿಪಿ ಸದಸ್ಯ ನಿಂಗಣ್ಣ ಬುಳ್ಳಾ, ಮುಖಂಡ ಸೋಮನಗೌಡ ಪಾಟೀಲ, ಭೀಮನಗೌಡ ಬಿರಾದಾರ, ಬಾಗಪ್ಪಗೌಡ ಪಾಟೀಲ, ಅಶೋಕಗೌಡ ಬಿರಾದಾರ, ಅಯ್ಯನಗೌಡ ಬಿರಾದಾರ, ಅಮೋಘ ಪೂಜಾರಿ, ಗೊಲ್ಲಾಳಪ್ಪಗೌಡ ಪಾಟೀಲ, ಸಾಯಿಪಟೇಲ ಯರಗಲ್ ಸೇರಿದಂತೆ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಇದ್ದರು.



# ವಚನಗಳ ಮೂಲಕ ಸಮಾನತೆಯ ಸಂದೇಶ ಸಾರಿದ ಬಸವಣ್ಣ

■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ಪಟ್ಟಣದಲ್ಲಿ ತಾಲೂಕು ಆಡಳಿತ ಹಾಗೂ ಶರಣ ಸಾಹಿತ್ಯ ಪರಿಷತ್ ವತಿಯಿಂದ ಬಸವಣ್ಣ ಅವರ 893ನೇ ಜಯಂತೋತ್ಸವವನ್ನು ಸೋಮವಾರ ತಹಶೀಲ್ದಾರ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಯಿತು.

ಪ್ರಾಸ್ತಾವಿಕವಾಗಿ ಶಿರಸ್ತೇದಾರ್ ಕೃಷ್ಣಾ ಗುಡೂರ ಮಾತನಾಡಿ, ಸಮಾಜದಲ್ಲಿ ಜಾತಿ ವ್ಯವಸ್ಥೆ ಮತ್ತು ಮೂಢನಂಬಿಕೆಗಳನ್ನು ನಿರ್ಮೂಲನೆ ಮಾಡಿ ಸಮಾನತೆಯ ಸಂದೇಶವನ್ನು ತಮ್ಮ ವಚನಗಳ ಮೂಲಕ ಜನರಿಗೆ ತಲುಪಿಸಿದ ಮಹಾನ್ ಚಿಂತಕರಾಗಿದ್ದರು ಎಂದು ಹೇಳಿದರು.

ತಾಲ್ಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್. ಬಾಲಗೊಂಡ ಮಾತನಾಡಿ, ನಮ್ಮ ದಿನನಿತ್ಯದ ಕಾಯಕದಲ್ಲಿ ನಿಷ್ಠೆ, ಶ್ರದ್ಧೆ ಮತ್ತು ಭಕ್ತಿ ಇದ್ದರೆ ಅದುವೇ ಕೈಲಾಸವೆಂಬ ಬಸವಣ್ಣನವರ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಮಲ್ಲಪ್ಪ ಗಣಿ ಅವರು ಸ್ವರಚಿತ ಕವನವನ್ನು ಭಜನಾ ಶೈಲಿಯಲ್ಲಿ ಹಾಡಿ ಕಾರ್ಯಕ್ರಮಕ್ಕೆ ಮೆರುಗು ತಂದರು.

ಈ ಸಂದರ್ಭದಲ್ಲಿ ಕಂದಾಯ ನಿರೀಕ್ಷಕ ಪಿ.ಎಸ್. ಹುಡೇದ, ಗ್ರಾಮ ಲೆಕ್ಕಾಧಿಕಾರಿ ಬಿ.ಎನ್. ಜಿಡ್ಡಿಮನಿ, ಆನಂದ ಇಂಡಿ, ಸಂಜು ಡೋಣೂರ, ಶಿಕ್ಷಕರಾದ ಕೃಷ್ಣಾ ರಜಪುತ, ಗರಸಂಗಿ ಸರ್ ಹಾಗೂ ಚೈತ್ರಾ ದಳವಾಯಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಕೊಲ್ಹಾರದಲ್ಲಿ ವಿಜೃಂಭಣೆಯ ಬಸವೇಶ್ವರ ಜಾತ್ರಾ ಮಹೋತ್ಸವ



■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ಪಟ್ಟಣದ ಬಸವೇಶ್ವರ ದೇವಸ್ಥಾನದಲ್ಲಿ ಅಕ್ಷಯ ತೃತೀಯ ಶುಭದಿನದಂದು ಬಸವ ಜಯಂತಿಯ ಪ್ರಯುಕ್ತ ಪ್ರತಿ ವರ್ಷದಂತೆ ಈ ವರ್ಷವೂ ಬಸವೇಶ್ವರ ಜಾತ್ರಾ ಮಹೋತ್ಸವ ಭಾರೀ ವಿಜೃಂಭಣೆಯಿಂದ ಜರುಗಿತು.

ಮುಂಜಾನೆ ವೇದಮೂರ್ತಿ ಮುರುಘೇಂದ್ರ ಮಹಾಸ್ವಾಮಿಗಳು (ಹಿರೇಮಠ) ಅವರ ಅಮೃತವಾಣಿಯಿಂದ ವೇದಮಂತ್ರಗಳ ಪಠಣದೊಂದಿಗೆ ದೇವಸ್ಥಾನದಲ್ಲಿರುವ ಬಸವೇಶ್ವರ ಶಿಲಾಮೂರ್ತಿಗೆ ರುದ್ರಾಭಿಷೇಕ ಸಹಿತ ಪೂಜಾ ವಿಧಿವಿಧಾನಗಳು ನೆರವೇರಿಸಲಾಯಿತು. ಭಕ್ತರಿಗೆ ಅನ್ನಪ್ರಸಾದದ ವ್ಯವಸ್ಥೆಯೂ ಮಾಡಲಾಗಿತ್ತು.

ಸಂಜೆ ಐದು ಗಂಟೆಗೆ ಪಟ್ಟಣದ ರೈತರು ತಮ್ಮ ಎತ್ತುಗಳನ್ನು ಅಲಂಕರಿಸಿಕೊಂಡು ಬಸವೇಶ್ವರ ದೇವಸ್ಥಾನಕ್ಕೆ ಕರೆತಂದರು. ಸುಮಾರು 101ಕ್ಕೂ ಅಧಿಕ ಎತ್ತುಗಳೊಂದಿಗೆ ಗೋಮಾತೆಯ ಮೆರವಣಿಗೆ ಮತ್ತು ಪಲ್ಲಕ್ಕಿ ಉತ್ಸವವು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಕಲ ವಾದ್ಯ ವೈಭವಗಳೊಂದಿಗೆ ನೂರಾರು ರೈತರು ಹಾಗೂ ದೇವಸ್ಥಾನದ ಆಡಳಿತ ಮಂಡಳಿಯವರ ಸಮ್ಮುಖದಲ್ಲಿ ಸಾಂಗೋಪಾಂಗವಾಗಿ ನಡೆಯಿತು.

ಗೋಮಾತೆ, ಎತ್ತುಗಳು ಹಾಗೂ ಬಸವೇಶ್ವರ ಮತ್ತು ಅಕ್ಕಮಹಾದೇವಿಯ ಭಾವಚಿತ್ರಗಳ ಮೆರವಣಿಗೆ ದೇವಸ್ಥಾನಕ್ಕೆ ತಲುಪಿದ ಬಳಿಕ ರೈತ–ರಿಗೆ ಉಪಯುಕ್ತವಾಗುವ ಕೃಷಿ ಸಂಬಂಧಿತ ವಿವಿಧ ಬಹುಮಾನಗಳನ್ನು ಆಡಳಿತ ಮಂಡಳಿಯವರು ವಿತರಿಸಿದರು.

ತದನಂತರ ಬಸವಣ್ಣನವರ ತೊಟ್ಟಿಲೋತ್ಸವ ಕಾರ್ಯಕ್ರಮವು ನೂರಾರು ಮಹಿಳೆಯರ ಸಮ್ಮುಖದಲ್ಲಿ ಜನಪದ ಹಾಡುಗಳೊಂದಿಗೆ ನೆರವೇರಿತು.

ಈ ಸಂದರ್ಭದಲ್ಲಿ ಊರಿನ ಸರ್ವ ಜನಾಂಗದ ನಾಗರಿಕರು ಭಾಗವಹಿಸಿದರು.

# ಬಸವ ತತ್ವ ಸಕಲ ಶರಣರ ವಚನಗಳ ಸಾರ : ಕುಲಕರ್ಣಿ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಇಷ್ಟಲಿಂಗ ಎಷ್ಟು ಮಹತ್ವ ಹೊಂದಿದೆಯೋ ವಚನ ಸಾಹಿತ್ಯವೂ ಅಷ್ಟೇ ಮಹತ್ವ ಹೊಂದಿದೆ. ಬಸವ ತತ್ವ ಬರೀ ಬಸವಣ್ಣನವರದ್ದಷ್ಟೇ ಅಲ್ಲ, ಅದು ಸಕಲ ಶರಣ–ರ ವಚನಗಳ ಸಾರವಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಆರ್.ಡಿ.ಕುಲಕರ್ಣಿ ಹೇಳಿದರು.

ಸಿಂದಗಿ ನಗರದ ನಾಗೂರ ಬಡಾವಣೆಯಲ್ಲಿರುವ ಎಸ್.ಎಸ್.ವಿ.ವಿ.ವಿ ಸಂಸ್ಥೆಯ ವಿದ್ಯಾನಿಕೇತನ ಪ್ರಾಥ–ಮಿಕ ಶಾಲೆ ಹಾಗೂ ಪ್ರೇರಣಾ ಆಂಗ್ಲ ಮಾಧ್ಯಮ ಪ್ರಾಥ–ಮಿಕ ಶಾಲೆಯಲ್ಲಿ ಬಸವಣ್ಣನವರ 893ನೇ ಜಯಂತಿಯನ್ನು ಆಚರಿಸಿ ಮಾತನಾಡಿದ ಅವರು, ಲಿಂಗಧಾರಣೆ ಹಾಗೂ ಇಷ್ಟಲಿಂಗ ಪೂಜೆಯು ವೈಜ್ಞಾನಿಕವಾದದ್ದು. ಇದರಿಂದ ಮನಸಿಗೆ ಶಾಂತಿ, ನೆಮ್ಮದಿ ಸಿಗುತ್ತದೆ. ಇಷ್ಟಲಿಂಗ ಪೂಜೆಯಿಂದ ಮನುಷ್ಯನ ವೈಚಾರಿಕತೆ ಹೆಚ್ಚಿಸಲು ಸಾಧ್ಯ ಎಂದರು.

ಈ ವೇಳೆ ಸಂಸ್ಥೆಯ ನಿರ್ದೇಶಕ ಪಿ.ಡಿ.ಕುಲಕರ್ಣಿ, ವಿದ್ಯಾನಿಕೇತನ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ, ಪ್ರೇರಣಾ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯ ಎಮ್.ಪಿ.ಬುಕ್ಕಾ ಶಿಕ್ಷಕರಾದ ಸತೀಶ ಕುಲಕರ್ಣಿ, ಅಲ್ತಾಫ್ ತಾಂಬೋಳಿ, ಕುಮಾರ ಕಿರಣ ಕುಲಕರ್ಣಿ, ಸಂತೋಷ ಕುಂಟೋಜಿ, ಅಕ್ಷಯ ಯಲಗಟ್ಟಿ, ಶ್ರೀಕಾಂತ ಹೂನಳ್ಳಿ, ಬಿ.ಎಸ್.ಪಾಟೀಲ, ಎಸ್.ವಿ.ಕಡಣಿ, ಎಮ್.ಎಮ್. ಜುಮನಾಳ, ಎಮ್.ಜಿ.ಧ್ಯಾಮಗೊಂಡ, ವಿ.ಎ.ನಾಯಕ, ಎಮ್. ಜಿ.ಬಳಗಾನೂರ, ಶಿಲ್ಪಾ ಎಸ್.ಪಾಟೀಲ, ವಿ.ಎ.ನಾಯಕ, ಆರ್.ಎಮ್.ಫಕೀರಪೂರ, ವಿಜಯಲಕ್ಷ್ಮಿ ಅಲಾಳಮಠ, ರೂಪಾ ಶಿವಸಿಂಪಿಗೇರ, ಸಾವಿತ್ರಿ ವಿರಾಪೂರ, ಆರ್.ಎಮ್.ಪಕೀರಪುರ ಸೇರಿದಂತೆ ಬೋಧಕೇತರ ಸಿಬ್ಬಂದಿಗಳು ಹಾಗೂ ಮಕ್ಕಳು ಇದ್ದರು.

ವಿದ್ಯಾರ್ಥಿಗಳಾದ ದರ್ಶಿನಿ ಅಲಾಳಮಠ, ಅಭಿನವ ನಾಯ್ಕೋಡಿ, ಶಾಲಿನಿ ಬಿರಾದಾರ, ಸಾಹಿತ್ಯ ಹಿರೇಮಠ ಹಾಗೂ ಸಂಗಡಿಗರಿಂದ ವಚನ ಗಾಯನದೊಂದಿಗೆ ಪುಷ್ಪಾರ್ಪಣೆಯನ್ನು ಸಲ್ಲಿಸಲಾಯಿತು.

**ಶ್ರೀ ಪದ್ಮರಾಜ ಮಹಿಳಾ ಕಾಲೇಜು**

ಪಟ್ಟಣದ ಶ್ರೀ ಪದ್ಮರಾಜ ಮಹಿಳಾ ಪಪೂ ಕಾಲೇಜಿನಲ್ಲಿ ಬಸವಣ್ಣನವರ 893ನೇ ಜಯಂತಿಯನ್ನು ಆಚ–ರಿಸಲಾಯಿತು. ಇ

ದೇ ವೇಳೆ ಪದವಿ ಕಾಲೇಜಿನ ಪ್ರಾಚಾರ್ಯ ವ್ಹಿ.ಡಿ.ಪಾಟೀಲ, ಉಪನ್ಯಾಸಕರಾದ ಯು.ಸಿ.ಪೂಜೇರಿ, ಮಮತಾ ಹರನಾಳ, ಹೇಮಾ ಕಾಸರ, ವಿಜಯಲಕ್ಷ್ಮಿ ಭಜಂತ್ರಿ ಶಿವಶಂಕರ ಕುಂಬಾರ ಸೇರಿದಂತೆ ಮಾಹಾವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳು ಇದ್ದರು.

**ಮಹಿಳಾ ವಸತಿ ನಿಲಯ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಡಿಯಲ್ಲಿ ಶ್ರೀಧರಸ್ವಾಮಿ ವಿದ್ಯಾವರ್ಧಕ ಸಂಘ ನಡೆಸುವ ಮಹಿಳಾ ವಸತಿ ನಿಲಯದಲ್ಲಿ ಬಸವಣ್ಣನವರ 893ನೇ ಜಯಂತಿಯನ್ನು ಆಚರಿಸಲಾಯಿತು. ಮಹಿಳಾ ಸಾಂತ್ವನ ಸಹಾಯವಾಣಿ ಕೇಂದ್ರದ ಸಿಬ್ಬಂದಿ ರಶ್ಮಿ ನೂಲಾನವರ, ವಿದ್ಯಾವತಿ ದೇಸಾಯಿ ಇದ್ದರು.

# ವಿಶ್ವದ ಆಧ್ಯಾತ್ಮಿಕ ಸಂಸತ್ತಿನ ಶಿಲ್ಪಿ ಬಸವಣ್ಣ : ಎಸಿ ಚಿದಾನಂದ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ರಾಷ್ಟ್ರ ಕಂಡ ಅಪ್ರತಿಮ ಸಮಾಜ ಸುಧಾರಕ ತತ್ವಜ್ಞಾನಿ ಹಾಗೂ ದಾರ್ಶನಿಕ ಭಕ್ತಿ ಭಂಡಾರಿ ಜಗಜ್ಯೋತಿ ಕ್ರಾಂತಿಯೋಗಿ ಬಸವೇಶ್ವರರು ವಿಶ್ವದ ಮೊದಲ ಆಧ್ಯಾತ್ಮಿಕ ಸಂಸತ್ತಿನ ಶಿಲ್ಪಿ ಎಂದು ಕಂದಾಯ ಉಪವಿಬಾಗಾಧಿಕಾರಿ ಚಿದಾನಂದ ಗುರುಸ್ವಾಮಿ ಹೇಳಿದರು.

ನಗರದ ತಾಲೂಕಾ ಆಡಳಿತ ವತಿಯಿಂದ ನಡೆದ ಬಸವೇಶ್ವರರ 895 ನೆಯ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಮಾನತೆಯನ್ನು ಎಲ್ಲರಿಗಿಂತ ಮೊದಲು ಪ್ರತಿಪಾದಿಸಿದ ಕ್ರಾಂತಿಕಾರಿ ಬಸವಣ್ಣನವರು ತಮ್ಮ ವಚನಗಳ ಮೂಲಕ ಕಾಯಕದ ಮಹತ್ವ ಆತ್ಮಶುದ್ದಿಯ ಅಗತ್ಯ ನಿರಹಂಕಾರದ ತತ್ವಗಳನ್ನು ಎಲ್ಲರಿಗೂ ತಲುಪಿಸುವ ಮೂಲಕ ಧರ್ಮ ಮತ್ತು ಶ್ರೀಸಾಮಾನ್ಯರ ನಡುವೆ ಇದ್ದ ಅಂತರವನ್ನು ಕರಗಿಸಿದರು ಎಂದರು.

ತಹಸೀಲ್ದಾರ ಬಿ.ಎಸ್.ಕಡಕಬಾವಿ ಮಾತನಾಡಿ, ಜಾತಿ ಮತ್ತು ವರ್ಗಾಧರಿತ ಹರಿದು ಹಂಚಿ ಹೋಗಿದ್ದ ಸಮಾಜವನ್ನು ಜಾತಿ ರಹಿತ ವರ್ಗರಹಿತ ಸಮಾಜವನ್ನಾಗಿಸುವ ನಿಟ್ಟಿನಲ್ಲಿ ಅವರ ಹೋರಾಟ ಕ್ರಾಂತಿಕಾರಿಯಾಗಿತ್ತು. ಬಸವಣ್ಣನವರ ಕಾಯಕವೇ ಕೈಲಾಸ ಮತ್ತು ದಾಸೋಹ ಎಂಬ ತತ್ವಗಳು ಸತ್ಯ ನಿಷ್ಠ ಶ್ರಮವನ್ನು ದೈವ ಪೂಜೆಯಂತಲೂ ಹಾಗೂ ಸಮಾಜದಲ್ಲಿ ಸಮಾನತೆಯ ಬಾಂದವ್ಯದ ಮೂಲ ಸೇತುವೆಯಂತೆ ಬಳಸಿಕೊಂಡರು ಎಂದರು.

ಕಾರ್ಯಕ್ರಮದಲ್ಲಿ ವೀರಶೈವ ಮಹಾಸಭಾ ಉಪಾಧ್ಯಕ್ಷ ಆರ್.ವಿ.ಪಾಟೀಲ, ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷ ಬಸವರಾಜ ರಾಹೂರ, ಎಸ್.ಆರ್. ಮುಜಗೊಂಡ, ಸಂತೋಷ ಹೊಟಕರ, ಬಸವ ಸಮಿತಿಯ ಭೀಮಾಶಂಕರ ಪ್ರಚಂಡಿ, ನೀಲಪ್ಪಾ ಖಾನಾಪುರ, ಶರಣು ಹೋಳಗಿ, ಶ್ರೀಕಾಂತ ಬಡಿಗೇರ, ಅಂಬರೀಷ ಬಸನಾಳ, ಅವಿನಾಶ ಬಗಲಿ, ಭೀಮನಗೌಡ ಪಾಟೀಲ ತಡವಲಗಾ ಶ್ರೀಮತಿ ಎಸ್.ಎಂ.ಕೊಡತೆ, ಎ.ಜಿ.ಗುನ್ನಾಪುರ, ಸುವರ್ಣಾ ಹಾವಿನಾಳ, ಯು.ಎಸ್.ಕಟ್ಟಿಮನಿ, ಅನೀಲಕುಮಾರ ಮಠ ಮತ್ತಿತರಿದ್ದರು.

ಬಸವೇಶ್ವರ ವೃತ್ತದಲ್ಲಿ ಅನೀಲಗೌಡ ಬಿರಾದಾರ ಇವರಿಂದ ಪೂಜೆ, ಅಪ್ಪು ಪವಾರ, ಸಿದ್ದು ಪ್ರಚಂಡಿ, ಜೆಡಿಎಸ್ ಮುಖಂಡ ಬಿ.ಡಿ.ಪಾಟೀಲ, ನಗರಸಭೆ ಪೌರಾಯುಕ್ತ ಶಿವಾನಂದ ಪೂಜಾರಿ, ಪ್ರಶಾಂತ ಗವಳಿ, ಪ್ರಶಾಂತ ಲಾಳಸಂಗಿ, ಉಮೇಶ ಲಚ್ಯಾಣ, ಸುಧೀರ ಕರಕಟ್ಟಿ, ರಾಘು ನಿಚ್ಚಾಳ ಮತ್ತಿತರರಿದ್ದರು.

ಎಕ್ಕಾ ಗಾಡಿ ಸಂಘದ ವತಿಯಿಂದ ಪೂಜೆ ಮತ್ತು ಪ್ರಸಾದ ವಿತರಣೆ ಮಾಡಿದರು. ಸಿದ್ದಪ್ಪ ಕುಂಬಾರ ಸಿದ್ದಣ್ಣ ಪೂಜಾರಿ ಮತ್ತಿತರಿದ್ದರು.

# ‘ವಚನ ಗಾನ ಕೋಗಿಲೆ’ ನೈನಾ ಗಿರಿಗೌಡರ ಮುಡಿಗೆ

■ ಉದಯರಶ್ಮಿ ದಿನಪತ್ರಿಕೆ

ಭಾರತೀಯ ಸಂಸ್ಕೃತಿ ಮತ್ತು ಸಂಗೀತ ಕ್ಷೇತ್ರಗಳಲ್ಲಿ ದಾಪುಗಾಲು ಇಟ್ಟು ವಚನ ಸಾಹಿತ್ಯದ ಮೌಲ್ಯವನ್ನು ಪಸ–ರಿಸುವ ಗುರುತರವಾದ ಜವಾಬ್ದಾರಿಯನ್ನು ಕೈಗೊಂಡ

ಅಪ್ಪಟ ಹಿಂದೂಸ್ತಾನಿ ಗಾಯಕಿ ಕಲಾವಿದೆ ಬೆಳಗಾವಿಯ ಶರಣೆ ನೈನಾ ಗಿರಿಗೌಡರ ..

ಚಿಕ್ಕೋಡಿಯ ಪ್ರತಿಷ್ಠಿತ ಭಾತೆ ಮನೆತನದ ಶ್ರೀ ಶಿವಲಿಂಗಪ್ಪ ಭಾತೆ ವಕೀಲರು ತಾಯಿ ಶರಣೆ ಮಂಗಳಾ ಶಿ ಭಾತೆ ಇವರ ಮಗಳಾಗಿ ಜನಿಸಿ ತಮ್ಮ ಪ್ರಾಥಮಿಕ ಶಿಕ್ಷಣವನ್ನೂ ಚಿಕ್ಕೋಡಿಯಲ್ಲಿ ಮುಗಿಸಿ ಅಲ್ಲಿಯೇ ತಮ್ಮ ವಿಜ್ಞಾನದ ಪದವಿ ಪಡೆದು ಒಬ್ಬ ವಿನಮ್ರ ಭಾವದ ಸರಳ ಸಜ್ಜನಿಕೆಯ ಸಾಕಾರ ಮೂರ್ತಿ.

ಬಾಲ್ಯದಿಂದಲೂ ಸಂಗೀತದ ಗೀಳು ಹೊಂದಿರುವ ಅಪರೂಪದ ಪ್ರಬುದ್ಧ ಗಾಯಕಿ ನೈನಾ ಇವರಿಗೆ ತಾಯಿಯೇ ಸಂಗೀತದ ಪ್ರಥಮ ಗುರು

ಬೆಳಗಾವಿಯ ಶ್ರೀ ಉಮೇಶ್ ಗಿರಿಗೌಡರನ್ನು ಮದುವೆಯಾದ ಮೇಲೆ ಸಂಗೀತ ಅಭ್ಯಾಸ ಮುಂದುವರೆಸಿದರು. ಬೆಳಗಾವಿಯ ಕನ್ನಡ ಭವನದಲ್ಲಿ ಖ್ಯಾತ ಸಂಗೀತ ತಜ್ಞೆ ಡಾ ಸುನೀತಾ ಪಾಟಿಲ ಅವರ ಹತ್ತಿರ ಸಂಗೀತ ಶಿಕ್ಷಣ ಶಾಸ್ತ್ರೀಯವಾಗಿ ಕಲಿತರು.

ಕಾರಂಜಿಶ್ರೀ ಮಠದ ಶ್ರೀ ಗುರುಸಿದ್ಧಸ್ವಾಮಿಗಳ ಸಾನಿಧ್ಯ ಶ್ರೀ ರೇಣುಕಾಶ್ರಮದ ಮಾತೋಶ್ರೀ ಗಂಗಾಮಾತಾ ಇವರ ನೆರಳಲ್ಲಿ ತಮ್ಮ ಸಂಗೀತ ಸೇವೆ ವಚನ ಪ್ರಾರ್ಥ–ನೆ ಮುಂದುವರೆಸಿದರು. ರುದ್ರಾಕ್ಷಿ ಮಠದ ಬೇರೆ ಬೇರೆ ಶಿಕ್ಷಣ ಸಂಸ್ಥೆಗಳನ್ನು ಒಳಗೊಂಡ ಬೆಳಗಾವಿಯ ಶ್ರೀಮಹಂತೇಶನಗರದ ರಹವಾಸಿಗಳ ಬಿ ಇಡಿ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಸಂಗೀತ ಪ್ರಾಧ್ಯಾಪಕರಾಗಿ



ಸಾಧಕರು



**ಪ್ರಶಸ್ತಿ-ಪುರಸ್ಕಾರಗಳು**

**ಬೆಳಗಾವಿ ಲಿಂಗಾಯತ ಸೈನ್ಯ ಪ್ರಶಸ್ತಿ**
**ಸಿರಿಗನ್ನಡ ರಾಷ್ಟ್ರೀಯ ಪ್ರತಿಷ್ಠಾನದ ಕನ್ನಡ ಕಲಾವೈಭವ ಪ್ರಶಸ್ತಿ**
**ನಾಗನೂರು ರುದ್ರಾಕ್ಷಿಮಠದ ಮಹಿಳಾರತ್ನ ಪ್ರಶಸ್ತಿ ಪಡೆದ ವಿನಯ ಭಾವದ ಸಂಗೀತ ಸಾಧಕಿ.**

ಸೇವೆ ಸಲ್ಲಿಸಿದರು.

ಈ ಮಧ್ಯೆ ಕೆ ಎಲ್ ಇ ಸಂಸ್ಥೆಯ ಸ್ಕೂಲ್ ಆಫ್ ಮ್ಯೂಸಿಕ್ ನಲ್ಲಿ ತಮ್ಮ ಹಿಂದೂಸ್ತಾನಿ ಸಂಗೀತದ ಸ್ನಾತಕೋತ್ತರ ಪದವಿಯನ್ನು ಬಂಗಾರದ ಪದಕದೊಂದಿಗೆ ಪಾಸಾದರು.

ಬೆಳಗಾವಿ ಜಿಲ್ಲೆಯ ಅಥಣಿ ಚಿಕ್ಕೋಡಿ ನಿಪ್ಪಾಣಿ ಗೋಕಾಕ ಸಂಕೇಶ್ವರ ಬೈಲಹೊಂಗಲ ಮುಂತಾದ ಎಲ್ಲಾ ತಾಲೂಕುಗಳಲ್ಲಿ ತಮ್ಮ ಸಂಗೀತದ ಪ್ರತಿಭೆಯನ್ನು ಜನ–ರಿಗೆ ನೀಡಿದ್ದಾರೆ.

ರಂಗಗೀತೆಗಳ ತರಬೇತಿಯನ್ನು ರಂಗ ಜಂಗಮ ನಾಡೋಜ ಡಾ ಏಣಗಿ ಬಾಳಪ್ಪ ಅವರಿಂದ ಒಂದು ವರುಷ ಪಡೆದರು. ಭಾವ ಗೀತೆ ವಚನ ಪ್ರಾರ್ಥನೆ ರಂಗಗೀತೆ ಮುಂತಾದ ಎಲ್ಲಾ ಬಗೆಯ ಸಂಗೀತಗಳ ಪ್ರಾವೀಣ್ಯ ನೈನಾ ಗಿರಿಗೌಡರ ಇವರಲ್ಲಿ ಕಾಣಬಹುದು.

ಕಿತ್ತೂರು ಉತ್ಸವ ಸಂಗೊಳ್ಳಿ ರಾಯಣ್ಣ ಉತ್ಸವ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ತಮ್ಮ ಸಂಗೀತ ಸೇವೆ ಸಲ್ಲಿಸಿದ್ದಾರೆ.

ಬೆಳಗಾವಿಯಲ್ಲಿ ನಡೆದ ಲಿಂಗಾಯತ ಧರ್ಮದ ಸಮ್ಮೇಳನದಲ್ಲಿ 101 ಕಲಾವಿದರಿಂದ ವಚನ ಸಮೂಹ ಗಾಯನ ಮಾಡಿಸಿದ್ದು ಒಂದು ದಾಖಲೆ ಎಂದು ಹೇಳಬಹುದು. ವಿಜಯಪುರ, ಧಾರವಾಡ, ಬಾದಾಮಿ, ಸಿಂದಗಿ, ಬಸವ ಕಲ್ಯಾಣ ಮುಂತಾದ ಕಡೆಗಳಲ್ಲಿ ಸಂಗೀತ ಸೇವೆ ಸಲ್ಲಿಸಿದ್ದಾರೆ.

ಅಕ್ಕನ ಅರಿವು ತಂಡದ ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ ಪುಣೆ ಇದರ ಹಿರಿಯ ಅಜೀವ ಸದಸ್ಯೆಯಾಗಿರುವ ಲಿಂಗಾಯತ ಮಹಿಳಾ ಸಮಾಜದವ ಪದಾಧಿಕಾರಿಯಾಗಿಯೂ ಸೇವೆಯಲ್ಲಿದ್ದಾರೆ.

ಹಲವಾರು ಶರಣರ ರೂಪಕಗಳನ್ನು ನಾಟಕಗಳನ್ನು ರಚಿಸಿ ಸಂಗೀತಕ್ಕೆ ಅಳವಡಿಸಿ ಅತ್ಯುತ್ತಮ ರಂಗ ಪ್ರದರ್ಶನ ನೀಡಿದ್ದಾರೆ.

**ಏ.25 ರಂದು ಪ್ರಶಸ್ತಿ ಪ್ರದಾನ : ಪಟ್ಟಣ**



**ಇವರ ಸಂಗೀತ ಸೇವೆ ಗುರುತಿಸಿ ಅಂತರಾಷ್ಟ್ರೀಯ ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ ಪುಣೆ ಇದರ ವತಿಯಿಂದ ವಿಜಯಪುರ ಜಿಲ್ಲಾ ಘಟಕದ ಬಸವ ಜಯಂತಿ ಕಾರ್ಯಕ್ರಮದ ಅಂಗವಾಗಿ ನೈನಾ ಗಿರಿಗೌಡರ ಇವರಿಗೆ ದಿನಾಂಕ 25 ಏಪ್ರಿಲ್ ರಂದು ಬೆಳಿಗ್ಗೆ 10 ಗಂಟೆಗೆ ವಿಜಯಪುರದ ಹೇಮರಡ್ಡಿ ಮಲ್ಲಮ್ಮ ಕಲ್ಯಾಣ ಮಂಟಪದಲ್ಲಿ ಕೊಡಗು ವಿಶ್ವ ವಿದ್ಯಾಲಯದ ಕುಲಪತಿ ಪ್ರೊ ಅಶೋಕ ಸಂಗಪ್ಪ ಆಲೂರ ಮತ್ತು ಅಂತಾರಾಷ್ಟ್ರೀಯ ಖ್ಯಾತ ವೈದ್ಯರು ಡಾ ಅಜಿತ್ ಎಂ ರಾಂಪುರೆ ಇವರ ಸಮ್ಮುಖದಲ್ಲಿ ವಚನ ಗಾನ ಕೋಗಿಲೆ ಪ್ರದಾನ ಮಾಡಲಾಗುವುದು ಎಂದು ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ ಪುಣೆ ಇದರ ಅಧ್ಯಕ್ಷರಾದ ಡಾ ಶಶಿಕಾಂತ ಪಟ್ಟಣ ರಾಮದುರ್ಗ ಪುಣೆ ಇವರು ತಿಳಿಸಿದ್ದಾರೆ.**

ಲೇಖನ

■ **ಡಾ. ಶಶಿಕಾಂತ ಪಟ್ಟಣ**
**ಅಧ್ಯಕ್ಷರು**
**ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ,**
**ಪುಣೆ – ವಿಜಯಪುರ**



# ಸಕಲ ಜೀವಿಗಳಿಗೂ ಲೇಸನ್ನೆ ಬಯಸಿದ ಬಸವಣ್ಣನವರು : ಗುಮಶೆಟ್ಟಿ



■ ಉದಯರಶ್ಮಿ ದಿನಪತ್ರಿಕೆ

ಕಲಕೇರಿ: ಗ್ರಾಮದ ಮಲ್ಲಿಕಾರ್ಜುನ ವಿಧ್ಯಾವರ್ಧಕ ಸಂಘದ ಅಡಿಯಲ್ಲಿ ನಡೆಯುತ್ತಿರುವ ಅನುಧಾನಿತ ಬಸವೇಶ್ವರ ಪದವಿ ಪೂರ್ವ ಕಾಲೇಜು ಹಾಗೂ ಪ್ರೌಡಶಾಲೆ, ಪ್ರಾಥಮಿಕ ಶಾಲೆ, ಪದವಿ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಜಗಜ್ಯೋತಿ ಬಸವೇಶ್ವರರ ಜಯಂತ್ಯೋತ್ಸವವನ್ನು ಆಚ–ರಿಸಲಾಯಿತು.

ಈ ಸಂದರ್ಭದಲ್ಲಿ ಪ್ರೌಡಶಾಲೆಯ ಮುಖ್ಯಗುರುಗಳಾದ ಜಗದೀಶ ಗುಮಶೆಟ್ಟಿ ಮಾತನಾಡಿ, ಸಕಲ ಜೀವಿಗಳಿಗೂ ಲೇಸನ್ನೆ ಬಯಸಿದ ಅಣ್ಣ ಬಸವಣ್ಣನವರ ತತ್ವ ಮತ್ತು ಆದ–ರ್ಶಗಳನ್ನು ಪ್ರತಿಯೊಬ್ಬರು ಮೈಗೂಡಿಸಿಕೊಳ್ಳಬೇಕಿದೆ ಎಂದು ಹೆಳಿದರು.

ಬಸವೇಶ್ವರ ಪದವಿ ಕಾಲೇಜಿನ ಪ್ರಾಚಾರ್ಯ ಜೆ ಎಸ್ ಕಾದಳ್ಳಿ ನಿಂಗನಗೌಡ ಗುಂಡಕನಾಳ ಮಾತನಾಡಿದರು.

ಕಾರ್ಯಕ್ರಮದಲ್ಲಿ ವಿಶ್ವನಾಥ ಸಿಂದಗಿ, ಕಂಠೀರವ ದೇಸಾಯಿ, ರವಿಕುಮಾರ ಗುಮಶೆಟ್ಟಿ, ಆರ್ ವ್ಹಿ ಕುಲಕರ್ಣಿ, ಐ ಎಂ ಝುಳಕಿ ಸೇ–ರಿದಂತೆ ಕಾಲೇಜಿನ ವಿಧ್ಯಾರ್ಥಿಗಳು ಹಾಗೂ ಭೋದಕ,ಭೋದಕೇತರ ಸಿಬ್ಬಂದ್ದಿ ಹಾಜರಿದ್ದರು.

# ಧರ್ಮದ ಕಾರ್ಯಕ್ರಮ ಪ್ರತಿ ಮನುಷ್ಯನ ದಾರಿದೀಪ : ಶಂಕರಾನಂದ ಶ್ರೀ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ತಾಲೂಕಿನ ಲೋಣಿ (ಬಿಕೆ) ಗ್ರಾಮದ ಗ್ರಾಮ ದೇವತೆ ಶ್ರೀ ಭಾಗ್ಯವಂತಿ ಜಾತ್ರಾ ಮಹೋತ್ಸವ ಸಂಭ್ರಮದಿಂದ ಆಚರಿಸಲಾಯಿತು. ಪ್ರತಿ ವರ್ಷದಂತೆ ಈ ವರ್ಷವೂ ಅಕ್ಷಯ ತೃತೀಯ ದಂದು ಶ್ರೀ ಭಾಗ್ಯವಂತಿ ದೇವಿಯ ಜಾತ್ರೆಯನ್ನು ಗ್ರಾಮಸ್ಥರು ಸೇರಿಕೊಂಡು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ಜರುಗಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡ ಬಾಬಾಸಾಹೇಬ ವಿಜಯಧಾರೆ, ಇಂತಹ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತವೆ ಎಂದು ಹೇಳಿದರು.

ಜಾತ್ರೆಯ ಅಂಗವಾಗಿ ಭಾಗ್ಯವಂತಿ ದೇವಿಯ ಫೋಟೋ ಪೂಜೆ ನೆರವೇರಿಸಿ, ನಂತರ ಬರಗೂಡಿ ಭಾಗ್ಯವಂತಿ ಪಲ್ಲಕ್ಕಿ, ಲೋಣಿ ಬಿಕೆ ಲಾಯಗಂಗಾ ಪಲ್ಲಕ್ಕಿ, ರುದ್ರಮಹಾರಾಜರ ದಿಂಡಿ, ಗೊಂಬೆ ಕುಣಿತ ಹಾಗೂ ನೂರಾರು ಮುತ್ತೈದೆಯರಿಂದ ಕುಂಭದೊಂದಿಗೆ ಭವ್ಯ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿಬಂದಿತು.

ಶ್ರೀ ಸಿದ್ಧಾರೂಢ ಮಠ, ಆಳೂರ–ಪಡನೂರದ ಶ್ರೀ ಶಂಕರಾನಂದ ಮಹಾಸ್ವಾಮಿಗಳು ಆಶೀರ್ವಚನ ನೀಡಿ, ಧರ್ಮದಕಾರ್ಯಕ್ರಮಗಳುಜೀವನದದಾರಿದೀಪವಾಗಿದ್ದು, ಸಾಂಪ್ರದಾಯಿಕ ಬೆಳವಣಿಗೆಗೆ ಕಾರಣವಾಗುತ್ತವೆ. ಹಬ್ಬ–ಜಾತ್ರೆಗಳು ಕೇವಲ ಆಚರಣೆಗೆ ಸೀಮಿತವಾಗದೆ, ಜೀವನದ ಮೌಲ್ಯಗಳನ್ನು ಎತ್ತಿ ಹಿಡಿಯುತ್ತವೆ ಎಂದು ಹೇಳಿದರು.

ಪ್ರಕಾಶ ಜಿತ್ತಿ ಮಾತನಾಡಿ, ಜನರಲ್ಲಿ ಹಾಗೂ ಯುವಕರಲ್ಲಿ ಸಮಾನತೆ ಮತ್ತು ಸಾಂಪ್ರದಾಯಿಕ ಅರಿವು ಮೂಡಿಸುವ ಉದ್ದೇಶ ದೊಂದಿಗೆ ಪ್ರತಿ ವರ್ಷ ಗ್ರಾಮದ ಹಿರಿಯರು ಕಿರಿಯರು ಎನ್ನದೆ ಜಾತ್ರೆಯಲ್ಲಿ ಎಲ್ಲರು ಭಾಗವಹಿಸುವದರೊಂದಿಗೆ ಈ ಜಾತ್ರೆ ವಿಶೇಷವಾಗಿ ಸಾಮಾಜಿಕ ಜಾಗೃತಿ ಮೂಡಿಸುವದರಲ್ಲಿ ಮುಂಚುಣಿಯಲ್ಲಿದೆ ಎಂದರು.

ಇದೇ ವೇಳೆ ಶ್ರೀಮತಿ ಅನ್ನಪೂರ್ಣೇಶ್ವರಿ ಶಿರಾಡೋಣ, ಕಾಶಿಬಾಯಿ ವಾಲಿಕಾರ, ಗೀತಾ ಜಿತ್ತಿ, ಮಂಜುಳಾ ಮಾನೆ, ರೇಣುಕಾ ಅವಜಿ ಇವರಿಂದ ಸಾವಿರಾರು ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಿತು. ನಂತರ ಭಕ್ತ–ರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಯಿತು.

ಕಾರ್ಯಕ್ರಮದಲ್ಲಿ ದೇವಸ್ಥಾನ ಪೂಜಾರಿ ಸುರೇಶ ಪೂಜಾರಿ, ರಮೇಶ ಜಿತ್ತಿ, ಶ್ರೀನಿವಾಸ ಕುಲಕರ್ಣಿ, ರಾಜ–ಕುಮಾರ ಜಿತ್ತಿ, ಸೋಮು ಸ್ವಾಮಿ, ಗುರುಲಿಂಗಪ್ಪ ಉಮ್ಮರ್ಜಿ, ಮಲ್ಲಿಕಾರ್ಜುನ ಮೇತ್ರಿ, ಚಿದಾನಂದ ನಾವಿ, ಸುರೇಶಗೌಡ ಪಾಟೀಲ, ಸಿದ್ದು ಕರಜಗಿ ಸೇರಿದಂತೆ ಅನೇಕರು ಉಪಸ್ಥಿತ–ರಿದ್ದರು.

# ಶ್ರೇಷ್ಠ ಆಧ್ಯಾತ್ಮಿಕ ಸಂತ ಆದಿ ಶಂಕರಾಚಾರ್ಯರು : ಡಾ. ನಾಯಿಕ್



■ ಉದಯರಶ್ಮಿ ದಿನಪತ್ರಿಕೆ


ದೇವರಹಿಪ್ಪರಗಿ: ಶಂಕರಾಚಾರ್ಯರು ಅದ್ವೈತ ವೇದಾಂತದ ಮೂಲಕ ಹಿಂದೂ ಧರ್ಮವನ್ನು ಪುನರುಜ್ಜೀವನಗೊಳಿಸಿದ ಶ್ರೇಷ್ಠ ಆಧ್ಯಾತ್ಮಿಕ ಸಂತರಾಗಿದ್ದಾರೆ ಎಂದು ಹಿರಿಯ ವೈದ್ಯ ಆರ್. ಆರ್.ನಾಯಿಕ್ ಹೇಳಿದರು.

ತಾಲ್ಲೂಕು ಆಡಳಿತದಡಿಯಲ್ಲಿ ಮಂಗಳವಾರ ಜರುಗಿದ ಆದಿ ಜಗದ್ಗುರು ಶಂಕರಾಚಾರ್ಯರ 1238 ನೇ ಜಯಂತಿಯಲ್ಲಿ ಪಾಲ್ಗೊಂಡು ಮಾತನಾಡಿದರು. ಸಾಂಸ್ಕೃತಿಕ ಮತ್ತು ಧಾರ್ಮಿಕ ಅವನತಿಯ ಸಮಯದಲ್ಲಿ ಹಿಂದೂ ಧರ್ಮದ ಆಶಾಕಿರಣವಾಗಿ ನಿರ್ಣಾಯಕ ಪಾತ್ರ ವಹಿಸಿದ ಜಗದ್ಗುರು ಶಂಕರಾಚಾರ್ಯರು ಭಾರತೀಯ ತತ್ವಶಾಸ್ತ್ರದ ಶ್ರೇಷ್ಠ ವ್ಯಕ್ತಿಯಾಗಿದ್ದರು ಎಂದರು.

ಉಪನ್ಯಾಕ ಗಿರೀಶ ಕುಲಕರ್ಣಿ ಆದಿಜಗದ್ಗುರು ಶಂಕರರ ಕುರಿತು ಉಪನ್ಯಾಸ ನೀಡಿ ಮಾತನಾಡಿದರು.

ತಹಶೀಲ್ದಾರ ನಿಂಗಪ್ಪ ಅಧ್ಯಕ್ಷತೆ ವಹಿಸಿದ್ದರು.

ನಿವೃತ್ತ ಉಪನ್ಯಾಸಕ ಎಂ.ಆರ್.ಶಿರಸಂಗಿಮಠ, ನಿವೃತ್ತ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಸಿ.ಕೆ.ಕುದರಿ, ಕೃಷ್ಣಾಜೀ ಕುಲಕರ್ಣಿ, ಪಿ.ಎಸ್.ಮಿಂಚನಾಳ, ವೆಂಕಟೇಶ ಕುಲಕರ್ಣಿ, ಪ್ರಲ್ಹಾದ ಕುಲಕರ್ಣಿ, ಶ್ರೀಧರ ನಾಡಗೌಡ, ಶ್ರೀಪಾದ ಜೋಷಿ, ಚಿದಂಬರ್ ಕುಲಕರ್ಣಿ(ಹಂಚಲಿ), ಪ್ರವೀಣ ಕುಲಕರ್ಣಿ ಹಾಗೂ ಸಿಬ್ಬಂದಿ ಇದ್ದರು.



# ಮಕ್ಕಳಿಗೆ ಇಂದು ಕಂಪ್ಯೂಟರ್ ಜ್ಞಾನ ಅತ್ಯವಶ್ಯ : ಮಠಪತಿ

■ ಉದಯರಶ್ಮಿ ದಿನಪತ್ರಿಕೆ

ತಿಕೋಟಾ: ಅಧುನಿಕ ಜಗತ್ತನಲ್ಲಿ ಜಗತ್ತು ವೇಗವಾಗಿ ಬೆಳೆಯುತ್ತಿರುವದರಿಂದ ಇಂದಿನ ಮಕ್ಕಳಿಗೆ ಕಂಪ್ಯೂಟರ್ ಜ್ಞಾನ ಅಗತ್ಯವಾಗಿ ಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲ್ಲೂಕ ಅಧ್ಯಕ್ಷ ಚನ್ನಯ್ಯ ಮಠಪತಿ ಹೇಳಿದರು.

ತಾಲ್ಲೂಕಿನ ಕನಮಡಿ ಗ್ರಾಮದಲ್ಲಿರುವ ಶ್ರೀ ಮಾಣಿಕೇಶ್ವರಿ ಚೈತನ್ಯ ಕನ್ನಡ ಮತ್ತು ಆಂಗ್ಲ ಪ್ರಾಥಮಿಕ ಪ್ರೌಢ ಮತ್ತು ಪದವಿಪೂರ್ವ ಕಾಲೇಜಿನಲ್ಲಿ ಸೋಮವಾರ ಕಂಪ್ಯೂಟರ್ ಕಲಿಕಾ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಗಡಿ ಭಾಗದಲ್ಲಿರುವ ಈ ಶಾಲೆಯ ಮಕ್ಕಳಿಗೆ ಪಠ್ಯ, ಪಠ್ಯೇತರ ಪಾಠಗಳ ಜೊತೆಗೆ ತಂತ್ರಜ್ಞಾನದ ಜ್ಞಾನ ನೀಡಲು ಕಂಪ್ಯೂಟರ್ ಲ್ಯಾಬ್ ಆರಂಭಿಸಿರುವದು ಸಂತಸ ತಂದಿದೆ. ಗುಣಾತ್ಮಕ ಶಿಕ್ಷಣ ನೀಡುತ್ತಿರುವ ಈ ಮಾಣಿಕೇಶ್ವರಿ ಶಾಲೆ ಮಹಾರಾಷ್ಟ್ರದ ಗಡಿ ಭಾಗಕ್ಕೆ ಹೊಂದಿಕೆಯಾಗಿದ್ದರು ಮಕ್ಕಳ ಪಾಲಿನ ಆಶಾಕಿರಣವಾಗಿ ಈ ಸಂಸ್ಥೆ ಹೊರಹೊಮ್ಮಿದೆ ಎಂದರು.

ಸಂಸ್ಥೆಯ ಮುಖ್ಯಸ್ಥ ಚಿದಾನಂದ ಅವಟಿಯವರು ಮಕ್ಕಳು ಶಿಕ್ಷಣದ ಜೊತೆಗೆ ಪ್ರಾಥಮಿಕ ಹಾಗೂ ಪ್ರೌಢ ಹಂತದಲ್ಲೆ ಮಕ್ಕಳಿಗೆ ಕಂಪ್ಯೂಟರ್ ಜ್ಞಾನ ಕೊಡುವದರಿಂದ ಅಗತ್ಯವಾದ ಶಿಕ್ಷಣವನ್ನು ತಂತ್ರಜ್ಞಾನದ ಮೂಲಕ ಪಡೆಯಲು ಸಹಕಾರವಾಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಮುಖ್ಯಸ್ಥ ಚಿದಾನಂದ ಅವಟಿ ವಹಿಸಿದ್ದರು ಮುಖ್ಯ ಅತಿಥಿಗಳಾಗಿ ಶಂಕರಗೌಡ ಬಿರಾದಾರ್, ಮಹಾನಿಂಗ ಜವನರ, ವಿಜು ಮೆಡೆಗಾರ್ , ಕಲ್ಲಪ್ಪ ಪಲ್ಲೆದಕಟ್ಟಿ, ಮಂಜು ಹುಳಪಲ್ಲಿ, ಶಿವಲಿಂಗಪ್ಪ ಬಸಗೊಂಡವರ ಹಾಗೂ ಶಾಲೆ ಶಿಕ್ಷಕರಾದ ಪ್ರಭುದೇವ್, ವಾಸುದೇವ ಪಾಟೀಲ , ಮುಖ್ಯೋಪಾಧ್ಯಾಯ ಬಸವರಾಜ ಪಡನೂರ ಇದ್ದರು.

# ಸರಳತೆ ಮೆರೆದ ಚಿದಾನಂದ ಸವದಿ : ಇಂದಿರಾ ಕ್ಯಾಂಟೀನ್‌ನಲ್ಲಿ ಭೋಜನ




■ ಉದಯರಶ್ಮಿ ದಿನಪತ್ರಿಕೆ

ಅಥಣಿ: ತಾಲೂಕಿನಲ್ಲಿ ನೂತನವಾಗಿ ಆರಂಭಗೊಂಡಿರುವ ಇಂದಿರಾ ಕ್ಯಾಂಟೀನ್‌ಗೆ ಶಾಸಕ ಲಕ್ಷ್ಮಣ ಸವದಿ ಅವರ ಸುಪುತ್ರ ಹಾಗೂ ಯುವ ನಾಯಕ ಚಿದಾನಂದ ಸವದಿ ಅವರು ಅನಿ–ರೀಕ್ಷಿತ ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಸಾಮಾನ್ಯರಂತೆ ಸಾಲಿನಲ್ಲಿ ನಿಂತು ಟೋಕನ್ ಪಡೆದ ಅವರು, ಅಲ್ಲಿನ ಆಹಾರದ ರುಚಿ ಸವಿಯುವ ಮೂಲಕ ತಮ್ಮ ಸರಳತೆಯನ್ನು ಮೆರೆದರು.

ಕ್ಯಾಂಟೀನ್‌ನ ಸ್ವಚ್ಛತೆ ಮತ್ತು ಆಹಾರದ ಗುಣಮಟ್ಟವನ್ನು ಪರಿಶೀಲಿಸಿದ ಚಿದಾನಂದ ಸವದಿ ಅವರು, ಸಾರ್ವಜನಿಕರಿಗೆ ನೀಡಲಾಗುತ್ತಿರುವ ಸೌಲಭ್ಯಗಳ ಕುರಿತು ಮಾಹಿತಿ ಪಡೆದರು. ಬಳಿಕ ಅಲ್ಲಿನ ಸಿಬ್ಬಂದಿಯೊಂದಿಗೆ ಮಾತನಾಡಿ, ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದಂತೆ ಸೂಚನೆ ನೀಡಿದರು.

ಬಡವರು ಮತ್ತು ಶ್ರಮಿಕ ವರ್ಗದವ–ರಿಗೆ ಕಡಿಮೆ ದರದಲ್ಲಿ ಪೌಷ್ಟಿಕ ಆಹಾರ ಸಿಗಬೇಕು ಎಂಬುದು ಸರ್ಕಾರದ ಆಶಯ. ಅಥ–ಣಿಯ ಇಂದಿರಾ ಕ್ಯಾಂಟೀನ್‌ನಲ್ಲಿ ಆಹಾರದ ಗುಣಮಟ್ಟ ಉತ್ತಮವಾಗಿದೆ. ಬಡವರ ಹಸಿವು ನೀಗಿಸುವ ಈ ಕೇಂದ್ರಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ನಾವು ಸದಾ ನಿಗಾ ವಹಿಸುತ್ತೇವೆ. ತಾಲೂಕಿನ ಜನತೆ ಈ ಸೌಲಭ್ಯದ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪುರಸಭೆ ಸದಸ್ಯರು ಸ್ಥಳೀಯ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು

# ದೇವರಹಿಪ್ಪರಗಿಯಲ್ಲಿ ಬಸವೇಶ್ವರ ಭಾವಚಿತ್ರ ಮೆರವಣಿಗೆ



■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಬಸವೇಶ್ವರ ಭಾವಚಿತ್ರವನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುವುದರ ಮೂಲಕ ರೈತ ಬಳಗದಿಂದ ಬಸವ ಜಯಂತಿ ಆಚರಿಸಲಾಯಿತು.

ಪಟ್ಟಣದಲ್ಲಿ ಸೋಮವಾರ ಸಾಯಂಕಾಲ ರೈತ ಬಳಗದ ಸದಸ್ಯರು ಬಸವ ಜಯಂತಿ ಅಂಗವಾಗಿ ಬಸವೇಶ್ವರ ಭಾವಚಿತ್ರವನ್ನು ಎತ್ತಿನಗಾಡಿಯಲ್ಲಿ ಅಳವಡಿಸುವುದರ ಮೂಲಕ ಹಲಗೆ ವಾದ್ಯವೃಂದಗಳೊಂದಿಗೆ ಬಸವ ವೃತ್ತದಿಂದ ಮೆರವಣಿಗೆಗೆ ಚಾಲನೆ ನೀಡಿದರು. ನಂತರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸಂಪನ್ನಗೊಳಿಸಿದರು.

ಕಾಸುಗೌಡ ಬಿರಾದಾರ(ಜೆರ್ಲಿ), ರಾಚೋಟಯ್ಯ ಹಿರೇಮಠ, ಕಾಶೀನಾಥ ಸರೂರ, ಅಪ್ಪುಗೌಡ ಪಾಟೀಲ (ಜಿಡ್ಡಿಮನಿ), ಗುರು ಜಡಗೊಂಡ, ಬಸವರಾಜ ಇಂಡಿ, ಕಾಶೀನಾಥ ಮಡಗೊಂಡ, ರಮೇಶ ಅಸ್ಕಿ, ಸಂಪತ್ ಜಮಾದಾರ, ರಾಮು ದೇಸಾಯಿ, ಬಸವರಾಜ ಸರೂರ, ಸಂಜು ಕೋಟಿನ್ ಇದ್ದರು.

# ಕರ್ನಾಟಕ ವಿವಿ ಪತ್ರಿಕೆಗೆ ಡಾ.ಮುಮ್ತಾಜ ಬೇಗಂ ಲೇಖನ ಆಯ್ಕೆ

ಗಂಗಾವತಿ (ಕೊಪ್ಪಳ), ಕರ್ನಾಟಕ ವಿಶ್ವ ವಿದ್ಯಾಲಯದ ಪತಕ್ಕೆ ಲೇಖಕಿ, ಡಾ. ಮುಮ್ತಾಜ್ ಬೇಗಂ ಅವರ ಲೇಖನ ಆಯ್ಕೆಯಾಗಿದೆ.ಗಂಗಾವತಿ ಸರ್ಕಾರಿ ಪ್ರಥಮ ದರ್ಜೆಕಾಲೇಜುನ ಸಹ ಪ್ರಾಧ್ಯಾಪಕಿ ಡಾ.ಮುಮ್ತಾಜ್ ಬೇಗಂ ಅವರು ಹಿರಿಯ ಸಾಹಿತಿ ಡಾ. ಬರಗೂರ ರಾಮಚಂದ್ರಪ್ಪ ಅವರ ಶಾಂತಿ ಸ್ತ್ರೀ ಸಂವೇದನೆಯ ಒಳನೋಟ ಕುರಿತು ಬರೆದ ಲೇಖನ ವಿಶ್ವ ವಿದ್ಯಾಲಯ ಪತ್ರಿಕೆಗೆ ಆಯ್ಕೆಯಾಗಿದೆ. ವಿಶ್ವ ವಿದ್ಯಾಲಯದ ಸ್ನಾತಕ ಪದವಿಯ ಬಿಎ ನಾಲ್ಕನೇ ಸೆಮಿಸ್ಟರ್ ವಿಭಾಗದ ಐಚ್ಛಿಕ ಕನ್ನಡ ವಿಷಯಕ್ಕೆ ಡಾ.ಮುಮ್ತಾಜ ಬೇಗಂ ಅವರು ಡಾ. ಬರಗೂರರ ಶಾಂತಿ ಸ್ತ್ರೀ ಸಂವೇದನೆಯ ಒಳನೋಟ ಲೇಖನ ಆಯ್ಕೆ ಮಾಡಲಾಗಿದೆ.

# ರಾಜ್ಯ ಮುಕ್ತ ವಿವಿ ಕರಾಮುವಿ ಕೆ–ಸೆಟ್ ಮತ್ತು ಯುಜಿಸಿ–ನೆಟ್ ಪರೀಕ್ಷೆಗಳಿಗೆ ತರಬೇತಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕರ್ನಾಟಕ ಸರ್ಕಾರವು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮೂಲಕ ನಡೆಸಲಿರುವ ಮಟ್ಟದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಗೆ (ಕೆ–ಸೆಟ್) ಮತ್ತು ನವದೆಹ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದವರು ನಡೆಸಲಿರುವ ರಾಷ್ಟ್ರಮಟ್ಟದ ಕಾಲೇಜು ಸಹ ಪ್ರಾಧ್ಯಾಪಕರ (ಯುಜಿಸಿ–ನೆಟ್) ಮತ್ತು ಕಿರಿಯ ಶಿಷ್ಯ ವೇತನ ಸಂಶೋಧನೆ ಸಹಾಯಕರ ಅರ್ಹತಾ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ಮೈಸೂರಿನ ಕೇಂದ್ರ ಕಛೇರಿಯಲ್ಲಿ ನಿರ್ಧರಿಸಲಾಗಿದೆ.

ಆಸಕ್ತರು ಇದೇ ಏಪ್ರಿಲ್.24ರ ರೊಳಗಾಗಿ ಬೆಳಿಗ್ಗೆ 10.00 ಗಂಟೆಯಿಂದ ಸಂಜೆಯೊಳಗಾಗಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು ದೂರವಾಣಿ ಸಂಖ್ಯೆ: 0821–2515944 ಸಂಪರ್ಕಿಸಬಹುದೆಂದು ಕರಾಮುವಿ ಕುಲಸಚಿವ ಪ್ರೊ. ನವೀನ್ ಕುಮಾರ್ ಎಸ್.ಕೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದಸಾಪ ವಿಭಾಗೀಯ ಸಂಯೋಜಕರಾಗಿ ಕಟ್ಟಿಮನಿ ನೇಮಕ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದ ಮೋಹನ. ಭೀ ಕಟ್ಟಿಮನಿ ಅವರನ್ನು ದ ಸಾ ಪ ರಾಜ್ಯ ಘಟಕ ಬೆಳಗಾವಿ ವಿಭಾಗೀಯ ಸಂಯೋಜಕರಾನ್ನಾಗಿ ನೇಮಕ ಮಾಡಲಾಗಿದೆ.

ಮೋಹನ. ಕಟ್ಟಿಮನಿಯವರು ವಿಜಯಪುರದ ದಲಿತಸಾಹಿತ್ಯ, ಶರಣ ಸಾಹಿತ್ಯ, ಸಾಂಸ್ಕೃತಿಕ ಚಿಂತನೆ ಹಾಗೂ ಸಾಮಾಜಿಕ ಸೇವೆಯಲ್ಲಿ ಸಕ್ರಿಯವಾಗಿ ಉತ್ತಮ ಸಂಘಟಕರಾಗಿ, ಭಾವ ಲಹರಿ, ಜೀವಂತ ಶವಗಳು ನಕ್ಕಾಗ, ಬರಡನಾಡಿನಲ್ಲಿ ಬಂಗಾರ ಬೆಳೆದವರು, ಚಾಣಕ್ಯ ಬಿರಾದಾರ ಬದುಕಿನ ಚಿತ್ರಣ, ವಿಸ್ಮಯದ ಬೆನ್ನೇರಿ, ವಚನ ಫಕೀರ ಮತ್ತು ಹರ್ಡೇಕರ ಮಂಜಪ್ಪ ನಾಟಕ, ಪದ್ಮಭೂಷಣ ಜನರಲ್ ಜಿ. ಜಿ. ಬೆವೂರ ಕೃತಿಗಳನ್ನು ರಚಿಸುವದರ ಮೂಲಕ 1001 ಬಸವಣ್ಣನವರ ವಚನಗಳನ್ನು ಕಂಠ ಪಾಠದ ಮೂಲಕ ಹೇಳುವ ಮೂಲಕ ಅಕ್ಕಾ ಸಮ್ಮೇಳನದಲ್ಲಿ 2005ರಲ್ಲಿ ಭಾಗವಹಿಸಿ ಇಲ್ಲಿಯವರೆಗೆ ಬಸವ ತತ್ವದ ಮೇಲೆ ವಚನ ಸಾಹಿತ್ಯ ಕು–ರಿತು 900ಕ್ಕೂ ಹೆಚ್ಚು ಉಪನ್ಯಾಸಗಳನ್ನು ನೀಡಿದ್ದಾರೆ.

ಇದರೊಂದಿಗೆ ನಾಟಕ, ಸಾಕ್ಷ್ಯಾಚಿತ್ರ ನಿರ್ಮಾಣದ ಮೂಲಕ ಸಾಮಾಜಿಕ ಜಾಗೃತಿಯ ಕಾರ್ಯ ಮಾಡುತ್ತಿರುವ ಇವರನ್ನು ದ ಸಾ ಪ ರಾಜ್ಯ ಘಟಕ ಪದಾಧಿಕಾರಿಗಳೆಲ್ಲ ಚರ್ಚಿಸಿ ಶ್ರೀಯುತರನ್ನು ದಸಾಪ ರಾಜ್ಯ ಘಟಕದ ವಿಭಾಗಿಯ ಸಂಯೋಜಕರನ್ನ ನೇಮಿಸಲಾಗಿದೆ ಎಂದು ದಸಾಪ ರಾಜ್ಯಧ್ಯಕ್ಷ ಅರ್ಜುನ್ ಗೋಲಸಂಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೈರಿಗೆಯಲ್ಲಿ ಅಂಬೇಡ್ಕರ್ ಜಯಂತಿ & ರಣದಕಾಳಮ್ಮ ಜಾತ್ರಾ ಮಹೋತ್ಸವ

■ ಉದಯರಶ್ಮಿ ದಿನಪತ್ರಿಕೆ



ಹೆಚ್ ಡಿ ಕೋಟೆ: ತಾಲೂಕಿನ ಹೈರಿಗೆ ಗ್ರಾಮದಲ್ಲಿ ಶ್ರೀ ರಣದಕಾಳಮ್ಮ ಜಾತ್ರಾ ಮಹೋತ್ಸವ ಹಾಗೂ ಸಂವಿಧಾನ ಶಿಲ್ಪಿ ಡಾ. ಬಿ.ಆರ್ ಅಂಬೇಡ್ಕರ್ ಅವರ 135 ನೇ ಜಯಂತಿಯನ್ನು ಅತ್ಯಂತ ಅದ್ದೂರಿಯಾಗಿ, ಅಥ–ರ್ಥಪೂರ್ಣವಾಗಿ ಆಚರಿಸಲಾಯಿತು.

ಜಾತ್ರೆ ಹಾಗೂ ಅಂಬೇಡ್ಕರ್ ಜಯಂತಿ ಮಹೋತ್ಸವ ಹಿನ್ನೆಲೆ ಗ್ರಾಮದ ಬೀದಿಗಳನ್ನು ತಳಿರು ತೋರಣಗಳಿಂದ ಸಿಗರಗೊಳಿಸಲಾಗಿತ್ತು. ಮನೆ ಮುಂದೆ ರಂಗೋಲಿ ಬಿಡಿಸಲಾಗಿತ್ತು. ರಾತ್ರಿ ವೇಳೆ ಪ್ರಮುಖ ಬೀದಿಗಳು ವಿದ್ಯುತ್ ದೀಪಗಳಿಂದ ಜಗಮಗಿಸುತ್ತಿದ್ದವು. 3 ದಿನಗಳ ಕಾಲ ನಡೆದ ಈ ಜಾತ್ರಾ ಮಹೋತ್ಸವಕ್ಕೆ ಸುತ್ತಮುತ್ತಲಿನ ಗ್ರಾಮಸ್ಥರು ಆಗಮಿಸಿ, ದೇವಿಯ ಕೃಪೆಗೆ ಪಾತ್ರರಾದರು. ಬೆಳಗ್ಗೆ ದೇವಸ್ಥಾನದಲ್ಲಿ ವಿಶೇಷ ಪೂಜೆ ಕೈಂಕರ್ಯಗಳು ನಡೆದ್ರೆ, ರಾತ್ರಿ ದೇವಿಯನ್ನು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿಸಲಾಯಿತು. ಸತ್ತಿಗೆ ಸೂರಪಾನಿ, ತಮಟೆ ವಾದ್ಯ, ಅರಮನೆ ಬ್ಯಾಂಡ್ ಸೇರಿದಂತೆ ನಾನಾ ಕಲಾಪ್ರಕಾರಗಳು ಮೆರವಣಿಗೆಗೆ ಮೆರಗು ತಂದವು. ಭಕ್ತರು ರಸ್ತೆ ಇಕ್ಕೆಲುಗಳಲ್ಲಿ ನಿಂತು ದೇವಿಯ ವೈಭೋಗವನ್ನು ಕಣ್ತುಂಬಿಕೊಂಡರು.

ಅಂಬೇಡ್ಕರ್ ಜಯಂತಿ ಹಗು ಜಾತ್ರೆ ಪ್ರಯುಕ್ತ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾಮಿಡಿ ಕಿಲಾಡಿಗಳು ಖ್ಯಾತಿಯ ಚಂದ್ರಪ್ರಭ, ಶಿವು, ಚಿಲ್ಲರ್ ಮಂಜು ಅವರ ಕಾಮಿಡಿಗೆ ಪ್ರೇಕ್ಷಕರು ಬಿದ್ದು ಬಿದ್ದು ನಗಾಡಿದರು. ಪ್ರಸಾದ್ ಜಾಕಿ ತಂಡದವರಿಂದ ರಸಮಂಜರಿ ಕಾರ್ಯಕ್ರಮ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಾಡಿಸಿತ್ತು. ಕ್ರಿಕೆಟ್ ಪಂದ್ಯಾವಳಿ ಜೊತೆಗೆ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಯಿತು.

## ಅಂಬೇಡ್ಕರ್ ಜಯಂತಿ ಆಚರಣೆ

ಅಂಬೇಡ್ಕರ್ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಮೊದಲು ಶಾಲಾ ಮಕ್ಕಳು ಸಂವಿಧಾನ ಪೀಠಿಕೆ ಓದಿದರು. ಬಳಿಕ ನೆರೆದಿದ್ದ ಗಣ್ಯರು ಸಂವಿಧಾನ ಪೀಠಿಕೆ ವಾಚಿಸುವ ಮೂಲಕ ವಿಶ್ವಜ್ಞಾನಿ ಡಾ. ಬಿ.ಆರ್ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಏಪ್ರಿಲ್ 14 ಕೇವಲ ಒಂದು ದಿನಾಂಕವಲ್ಲ. ಅದು ಭಾರತದ ನೆಲದಲ್ಲಿ ಸಮಾನತೆ, ನ್ಯಾಯ ಮತ್ತು ಮಾನವ ಹಕ್ಕುಗಳು ನಿಜಾರ್ಥದಲ್ಲಿ ಮೊಳಕೆಯೊಡೆದ ದಿನ. ಏಪ್ರಿಲ್ 14, 1891ರಂದು ಮಧ್ಯಪ್ರದೇಶದ ಮಹೌ ಅನ್ನೋ ಪ್ರದೇಶದಲ್ಲಿ ಮಹಾರ್ ಎಂಬ ದಲಿತ ಸಮುದಾಯದಲ್ಲಿ ಮಗುವೊಂದರ ಜನನವಾಗುತ್ತೆ. ಆ ಮಗು ಮುಂದೊಮ್ಮೆ ಇಡೀ ಭಾರತದ ಯೋಚನಾ ಲಹರಿಯನ್ನೇ ಬದಲಾಯಿಸಿ, ಇಡೀ ದೇಶವನ್ನೇ ಪ್ರಬುದ್ಧ ರಾಷ್ಟ್ರವನ್ನಾಗಿ ಮಾಡುತ್ತೆ. ಆ ಮಗುವಿನ ಹೆಸರೇ ಡಾ. ಬಾಬಾ ಸಾಹೇಬ್ ಅಂಬೇಡ್ಕರ್. ಇಂದು ನಾವು ನೀವೆಲ್ಲರೂ ಒಟ್ಟುಗೂಡಿ ನಿಂತು ಮಾತನಾಡುತ್ತಿರುವುದಕ್ಕೆ ಅಂಬೇಡ್ಕರ್ ಅವರು ಕೊಟ್ಟ ಸಂವಿಧಾನವೇ ಕಾರಣ. ಹೀಗಾಗಿ ಪ್ರತಿಯೊಬ್ಬರೂ ಅಂಬೇಡ್ಕರ್ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಗಣ್ಯರು ಸಲಹೆ ನೀಡಿದರು

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR